# ಕಾನನ

ಸೆಪ್ಟೆಂಬರ್ – 2021

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

ನಿಸರ್ಗದೆಡೆಗೆ ಪಯಣ

© ಪವನ್ ಕುಮಾರ್ ಟಿ. ಎಸ್.

ಮುಖಪುಟ

ಗೋವಕ್ಕಿ



ಸೆಪ್ಟೆಂಬರ್ – 2021

## ಲೇಖನಗಳು


* ಮಳೆಗಾಲ ಮತ್ತು ಮರಕುಟಿಗ ಹಕ್ಕಿ – ಸ್ಮಿತಾ ರಾವ್

* ಸುಕ್ರಿ, ತುಳಸಿ ಅಜ್ಜಿಯರ ಪರಿಸರ ಪಾಠ – ಅನ್ನಪೂರ್ಣ ಬೈಂದೂರು

* ಕೆರೆ ಹಬ್ಬ – ಶಂಕರಪ್ಪ ಕೆ. ಪಿ.

* ದುಬಾರಿ ದುಂಬಿ – ಜೈಕುಮಾರ್ ಆರ್.

* ವಸುಂಧರೆ – ಜನಾರ್ಧನ್ ಎಂ. ಎನ್.

* ಪ್ರಕೃತಿ ಬಿಂಬ – ತುಷಾರ್ ಜಿ. ಆರ್.



**ವಿನ್ಯಾಸ**

ಧನರಾಜ್ ಎಂ.

**ಮುಖಪುಟ ಛಾಯಾಚಿತ್ರ**

ಹಯಾತ್ ಮೊಹಮ್ಮದ್

**ಪರಿಷ್ಕರಣೆ**

ಮುರಳಿ ಎಸ್.

ಡಾ. ಮಧುಸೂಧನ ಹೆಚ್. ಸಿ.

**ಕರಡು ತಿದ್ದುಪಡಿ**

ಡಾ.ದೀಪಕ್ ಭ., ಮೈಸೂರು




© ಸೇಪುರಿ ಸಾಯಿ ಅಖಿಲ್ ತೇಜ

# ಹುಣಸೆ ಮರ

**ಸಾಮಾನ್ಯ ಹೆಸರು : Tamarind Tree**

**ವೈಜ್ಞಾನಿಕ ಹೆಸರು : Tamarindus indica**



**© ರಾಕೇಶ್ ಆರ್. ವಿ.** **ಹುಣಸೆ ಮರ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ**

ಉಷ್ಣವಲಯ ಪ್ರದೇಶದಲ್ಲಿ ಬೆಳೆಯುವ ಹುಣಸೆ ಮರದ ಮೂಲಸ್ಥಳ ಆಫ್ರಿಕಾ ಖಂಡದ ಪೂರ್ವ ಭಾಗ. ಇದು ಆಫ್ರಿಕಾ, ಅಮೇರಿಕಾ ಹಾಗೂ ಭಾರತದಲ್ಲಿಯೂ ಸಹ ವ್ಯಾಪಿಸಿದೆ. ಸುಮಾರು 15 ರಿಂದ 25 ಮೀಟರ್ ಗಳಷ್ಟು ಎತ್ತರ ಬೆಳೆಯಬಲ್ಲ, ಈ ಮರದ ಕಾಂಡದ ಸುತ್ತಳತೆ ಸುಮಾರು 7.5 ಮೀಟರ್ ಗಳು. ಇದರ ತೊಗಟೆ ಒರಟಾಗಿದ್ದು, ಗಾಢ ಕಂದು ಬಣ್ಣವನ್ನು ಹೊಂದಿದೆ. ತುದಿ ದುಂಡಾಗಿರುವ ಸುಮಾರು 5 ಸೆಂಟಿಮೀಟರ್ ಅಗಲದ 10 ರಿಂದ 20 ಜೊತೆಯ ಸಣ್ಣ ಸಣ್ಣ ಎಲೆಗಳು ಪರಸ್ಪರ ವಿರುದ್ಧವಾಗಿ ಟೊಂಗೆಗಳಲ್ಲಿ ಜೋಡಣೆಯಾಗಿರುತ್ತವೆ. ಸದಾ ಹಸಿರಾಗಿರುವ ಎಲೆಗಳಿಂದ ಈ ಮರ ನಿತ್ಯ ಹರಿದ್ವರ್ಣವಾಗಿರುತ್ತದೆ. ಹಳದಿ ಹಾಗೂ ಕೆಂಪು ಮಿಶ್ರಿತವಾದ ಸಣ್ಣ ಹೂಗಳು, ಚಿಕ್ಕ-ಚಿಕ್ಕ ರೆಂಬೆಯ ಗೊಂಚಲಿನಲ್ಲಿರುತ್ತವೆ. ಸಾಮಾನ್ಯವಾಗಿ 5 ದಳಗಳನ್ನು ಹೊಂದಿರುತ್ತವೆ. ಗುಲಾಬಿ ಬಣ್ಣದ ಗೆರೆಗಳು ಹೂ ದಳಗಳ ಮೇಲೆ ರಚಿತವಾಗಿರುತ್ತವೆ. 12 ರಿಂದ 15 ಸೆಂಟಿಮೀಟರ್ ಗಳಷ್ಟು ಉದ್ದವಿರುವ ಇದರ ಕಾಯಿ ಹಸಿರಾಗಿ ಹುಳಿಯ ರುಚಿ ಹೊಂದಿದ್ದು, ಹಣ್ಣಾದಾಗ ಸಿಹಿ ಮಿಶ್ರಿತ ಹುಳಿಯಾಗಿರುತ್ತದೆ ಹಾಗೂ ಹಸಿರು ಬಣ್ಣದ ಸಿಪ್ಪೆಯು ಕಂದು ಬಣ್ಣಕ್ಕೆ ತಿರುಗುತ್ತದೆ. ಭಾರತದಲ್ಲಿ ಸಿಗುವ ಹುಣಸೆ ಪ್ರಭೇದವು 6 ರಿಂದ 12 ಬೀಜಗಳನ್ನು ಒಳಗೊಂಡಿರುತ್ತವೆ. ಇದರ ಎಲೆ ಹಾಗೂ ಹಣ್ಣನ್ನು ಅಡುಗೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಹುಣಸೆ ಹಣ್ಣನ್ನು ಮಲಬದ್ಧತೆ, ಪಿತ್ತಜನಕಾಂಗ ಮತ್ತು ಪಿತ್ತಕೋಶದ ಸಮಸ್ಯೆಗಳ ಜೊತೆಗೆ, ಉದರ ಸಮಸ್ಯೆಗೂ ಸಹ ಔಷಧಿಯಾಗಿ ಬಳಸಲಾಗುತ್ತದೆ.




# ಮಳೆಗಾಲ ಮತ್ತು ಮರಕುಟಿಗ ಹಕ್ಕಿ

ಕಳೆದ ವರ್ಷ ವಿವಿಧ ಕಾರಣಗಳಿಂದ ಎಲ್ಲರಿಗೂ ಭಿನ್ನ. ಕೆಲ ವರ್ಷಗಳ ಹಿಂದೆ ಬರೀ ಕೆಲವು ದಿನಗಳ ಮಟ್ಟಿಗೆ ಮಾತ್ರ ಅತಿಥಿಯಾಗಿ ಹೋಗುತ್ತಿದ್ದ ಅಜ್ಜಿಯ ಮನೆಗೆ, ಕೋವಿಡ್ ಪರಿಸ್ಥಿತಿಯಿಂದ ಕಳೆದ ವರ್ಷ ವಾರಗಟ್ಟಲೆ ಹೋಗಿ ನೆಮ್ಮದಿಯಿಂದ ಕಾಲಕಳೆಯುವ ಅವಕಾಶ ಸಿಕ್ಕಿತ್ತು. ಎಲ್ಲರಿಗೂ ಅಜ್ಜಿ ಮನೆಯೆಂಬುದು ಒಂದೊಂದು ರೀತಿಯಲ್ಲಿ ವಿಶೇಷವಾಗಿರುತ್ತದೆ. ನನಗೂ ಹಾಗೇ ಅಜ್ಜಿ ಮನೆ ಅನ್ನೋದು ಒಳ್ಳೆಯ ನೆನಪುಗಳನ್ನಷ್ಟೇ ಕೊಡುವ ಕಟ್ಟಿಟ್ಟ ಬುತ್ತಿ. ಪೂರ್ವಜನ್ಮದ ಪುಣ್ಯವೋ ಏನೋ ಎಂಬಂತೆ ಮಲೆನಾಡಿನಲ್ಲಿ ಬಾಲ್ಯದ ಅಮೂಲ್ಯ ಕ್ಷಣಗಳನ್ನು ಕಳೆದು, ಹಕ್ಕಿಗಳ ಕಲರವದಿಂದ ಆರಂಭವಾಗುವ ಬೆಳಗಿನಿಂದ, ಹಲವು ಜೀವಿಗಳ ಆಲಾಪಗಳಿಂದ ಮುಕ್ತಾಯವಾಗುವ ಹಲವು ರಾತ್ರಿಗಳನ್ನು ಇಲ್ಲಿ ನೋಡಿದ್ದೆ.

ನಾನು ಹೇಳುತ್ತಿರುವ ನನ್ನ ಅಜ್ಜಿಯ ಮನೆ ಮಲೆನಾಡಿನ ಒಂದು ಮೂಲೆಯಲ್ಲಿದೆ. ಇದಕ್ಕೆ ಗುಡ್ಡದ ಮನೆಯೆಂದೇ ಹೆಸರು. ಜನರು ವಾಸವಿರುವ ಹಳ್ಳಿಯಿಂದ ಸುಮಾರು 2 ಕಿ. ಮೀ ದೂರವಾಗಿ ಸಂಪೂರ್ಣ ಪ್ರತ್ಯೇಕವಾಗಿದ್ದು, ಈ ಮನೆಯ ಅಸ್ತಿತ್ವದ ಬಗ್ಗೆಯೂ ಎಷ್ಟೋ ಜನರಿಗೆ ತಿಳಿದಿರುವುದಿಲ್ಲ. ಬಾಗಿಲು ತೆರೆದು ಚಪ್ಪರ ದಾಟುತ್ತಿದ್ದಂತೆಯೇ ಹಲವು ಮಲೆನಾಡ ಮನೆಗಳಂತೆ ಇಲ್ಲೂ ಬ್ಯಾಣ (ಮಲೆನಾಡಿನ ಮನೆಯ ಮುಂದಿನ ಅಥವಾ ಹಿಂದಿನ ಜಾಗ)

ಆರಂಭವಾಗುತ್ತದೆ. ಇಂದಿಗೂ ಮನುಷ್ಯನ ಸ್ಪರ್ಶ ಕಾಣದ ತಮ್ಮಷ್ಟಕ್ಕೆ ಬೆಳೆಯಲು ಬಿಟ್ಟಿರುವ, ಯಾರೂ ಅದರ ಅಸ್ತಿತ್ವವನ್ನು ಪ್ರಶ್ನೆ ಮಾಡದೆ ಇದ್ದುದರಿಂದ ಮನಸ್ಸಿಗೆ ಬಂದ ಹಾಗೆ ಬೆಳೆಯುತ್ತಾ ಬಂದ ಇಲ್ಲಿಯ ಮರಗಳು, ದಾರಿ ಸವೆಸಿದಷ್ಟು ಉದ್ದಕ್ಕೂ ವಿಸ್ತರಿಸುತ್ತಾ ಹೋಗುತ್ತವೆ. ಇವು ಹಲವು ಜೀವ ವೈವಿಧ್ಯವನ್ನು ಪೋಷಿಸುತ್ತಾ, ತೇಜಸ್ವಿ, ಕುವೆಂಪು ಅವರ ಸಾಹಿತ್ಯದಲ್ಲಿ ಬರುವ ಎಷ್ಟೋ ಘಟನೆಗಳನ್ನು ನಿದರ್ಶಿಸುವ, ಅವರ ಮಾತಿನ ಗಾಂಭೀರ್ಯತೆಯ ಆಳವನ್ನು ತಲುಪುವ ತಾಣಗಳಾಗಿವೆ.




ಇಷ್ಟೆಲ್ಲಾ ಅಜ್ಜಿ ಮನೆಯ ಬಗ್ಗೆ ಹೇಳಲು ನನ್ನ ಒಳಗಿರುವ ಮೊದಲ ತುಡಿತವೇ ಇಂದು ಮಲೆನಾಡಿನಿಂದ ದೂರ ಬಂದು, ಬೇರೆ ದೇಶದಲ್ಲಿ ಅನಿವಾರ್ಯತೆಯ ಹೆಸರಿನಲ್ಲಿ ತಂಗಿದ್ದು, ಮಲೆನಾಡಿನ ನೆನಪಿನಲ್ಲಿ ಬದುಕುತ್ತಾ ಇರುವುದು. `ಬಿ ಅ ರೋಮನ್ ಇನ್ ರೋಮ್' ಎನ್ನುವ ಸಾಲಿನ ಅರ್ಥ ತಿಳಿಯುವುದು ಕಷ್ಟವಲ್ಲದಿದ್ದರೂ, ಅದರಂತೆ ಬದುಕುವುದು ಇನ್ನೂ ಸುಲಭದ ಮಾತಾಗಿಲ್ಲ. ಕಳೆದ ಮಳೆಗಾಲದಲ್ಲಿ ಮಂಗನಿಗೆ ಸ್ಪರ್ಧೆ ಕೊಡುವಂತೆ ಇಡೀ ಮಳೆಗಾಲದ ಉದ್ದಕ್ಕೂ ಹಲಸಿನ ಹಣ್ಣು ತಿಂದ ನೆನಪು, ತಿಂದು ಬಿಸಾಡಿದ ನೇರಳೆ ಹಣ್ಣಿನ ಬೀಜ, ಮಾವಿನ ಹಣ್ಣಿನ ಗೊರಟು ಎಲ್ಲವೂ ಇಂದು ಕನಸಿನಲ್ಲಿ ಬಂದು ಹೋಗುತ್ತವೆ. ಹೀಗೆ ಕೆದಕುತ್ತಾ ಹೋದರೆ ದಿನಗಟ್ಟಲೆ ಜಗಲಿ ಕಟ್ಟೆ ಕಥೆಯಂತೆ ಹೇಳುತ್ತಾ ಹೋಗಬಹುದಾದರೂ, ಇದರಲ್ಲಿ ಒಂದನ್ನು ಹೆಕ್ಕಿ, ಆ ವಿಶೇಷ ಅನುಭವವನ್ನು ಹಂಚಿಕೊಳ್ಳುವುದೇ ಈ ಲೇಖನದ ಉದ್ದೇಶ.




ಮುಂಗಾರು ಕಳೆದ ವರ್ಷ ಹೆಚ್ಚು ಕಡಿಮೆ ಸರಿಯಾಗೇ ಆಗಮನವಾಗಿ, ಮಳೆಗಾಲಕ್ಕೆ ಒಳ್ಳೆ ಆರಂಭವನ್ನೇ ನೀಡಿತ್ತು. ಹೀಗೆ ಭೋರ್ಗರೆಯುವ ಮಳೆಯ ಸೂಚನೆಯಿದ್ದ ಒಂದು ದಿನ, ಕೊಡೆ ಹಿಡಿದು ಕ್ಯಾಮೆರಾವನ್ನು ಹೆಗಲಿಗೇರಿಸಿ ಹೊರಟಿದ್ದೆ. ಮನೆಯಿಂದ ಸುಮಾರು 2 ಕಿ. ಮೀ ದೂರದವರೆಗೆ ಕಂಡ ದಾರಿಯಲ್ಲಿ ಸುಮ್ಮನೆ ನಡೆದು ಬಂದಿದ್ದೆ. ಎತ್ತರದ, ಒಂದು ಸಂಪೂರ್ಣ ಹಸಿರು ಹೊಂದಿದ್ದ ಮರದ ಮಧ್ಯದಲ್ಲಿ, ಕಪ್ಪು ಬಣ್ಣದ ದೊಡ್ಡ ಹಕ್ಕಿಯೊಂದು ಹಾರಿದಂತೆ ಕಂಡಿತು. ಯಾವ ಬಣ್ಣ ಕಂಡರೂ ಅದು ಕಪ್ಪು ಬಣ್ಣದಂತೆ ಕಾಣುವಂತಿದ್ದ ಮಬ್ಬು ಬೆಳಕಿನಲ್ಲಿ ಹಾರಿದ್ದು ಇಂತದ್ದೇ ಎಂದು ಹೇಳೋದು ಸುಲಭವಾಗಿರಲಿಲ್ಲ. ಸುಮಾರು ಹೊತ್ತು ತಲೆಯೆತ್ತಿ ನೋಡಿದರೂ, ಒಂದು ದೊಡ್ಡ ಪಕ್ಷಿ ಮರದ ಎತ್ತರಕ್ಕೆ ಹಾರಿ ಹೋಗಿದ್ದಷ್ಟೇ ನನಗೆ ಕಂಡಿದ್ದು. ಕೊನೆಗೆ ಮಳೆಯೂ ಆರಂಭವಾಗಿದ್ದರಿಂದ ಇನ್ನು ಅದರ ಜಾಡನ್ನು ಮುಂದೆ ಅರಸಲಾಗದೆ ಮನೆಗೆ ತೆರಳಬೇಕಾಯಿತು. ಇನ್ನು ಎರಡು ಮೂರು ದಿನ ಬೇರೆ-ಬೇರೆ ಸಮಯಕ್ಕೆ ಅದೇ ಜಾಗಕ್ಕೆ ತೆರಳಿ ಹುಡುಕಾಟ ನಡೆಸಿದರೂ ಸಹ ಅಂತಹ ಯಾವುದೇ ಹಕ್ಕಿಯ ಸುಳಿವು ಕಾಣಲಿಲ್ಲ.


ಇದಾಗಿ ಆರು ದಿನ ಕಳೆಯುತ್ತಿದ್ದಂತೆ ಬೆಳ್ಳಂ ಬೆಳಿಗ್ಗೆ, ನಮ್ಮ ಮನೆಯ ಜಾನುವಾರುಗಳ ಕೊಟ್ಟಿಗೆಯ ಬೆಳಗಿನ ಕೆಲಸದಲ್ಲಿ ಭಾಗಿಯಾಗುವ ನಮ್ಮ ಕೆಲಸದವನಾದ ಜಾನ ಬಂದು ಸಗಣಿ ತೆಗೆಯುತ್ತಾ, "ಅಮ್ಮಾ, ನಮ್ಮ ಮನೆಯ ಹತ್ರ ಕಪ್ಪಗೆ, ದೊಡ್ಡಕೆ ಇರೋ ಹಕ್ಕಿ ದಿನಾ 10 ಗಂಟೆಯ ಮೇಲೆ ಬಂದು ಸದ್ದು ಮಾಡ್ತದೆ. ನಿಮ್ಮ ಅಮ್ಮನವರ ದುರ್ಬಿನ್ ನಲ್ಲಿ ಚೆನ್ನಾಗಿ ಕಾಣಬಹುದೇನೋ" ಎಂದು ತನ್ನ ಎಲೆ ಅಡಿಕೆ ಹಾಕಿದ ಬಾಯಲ್ಲಿ ರಾಗವಾಗಿ ಎಳೆದು ಚಿಕ್ಕಮ್ಮನಿಗೆ ಹೇಳುತ್ತಿದ್ದ. ಇದನ್ನು ಕೇಳಲೆಂದೇ ಕಾದಿದ್ದ ಕಿವಿಗಳು ನಿದ್ರಾವಸ್ಥೆಯಲ್ಲೂ ಸೂಕ್ಷ್ಮವಾಗಿ ತೆರೆದು, ಎಲ್ಲವನ್ನೂ ತನ್ನೊಳಗೆ ಸದ್ದಿಲ್ಲದೇ ಸೆಳೆದಿತ್ತು. ಸಂಪೂರ್ಣ ನಿದ್ದೆಯಿಂದ ಎಚ್ಚರವಾಗುತ್ತಿದ್ದಂತೆ ಜಾನ ಹೀಗೆ ಹೇಳಿದ್ದಾನಾ ಎಂದು ಚಿಕ್ಕಮ್ಮನಲ್ಲಿ ದೃಢಪಡಿಸಿಕೊಂಡು, ಅದೇ ಹುರುಪಿನಲ್ಲಿ ತಿಂಡಿ ತಿಂದು ಅವರ ಮನೆಯ ಹತ್ತಿರ ಹೋಗೋಕೆ ಸನ್ನದ್ಧಳಾದೆ.

ಅಂದೂ ಮಳೆಯ ಮುನ್ಸೂಚನೆ ಇದ್ದರೂ, ಹಕ್ಕಿ ಕಾಣುವ ಸಮಯಕ್ಕೆ ಅದು ಸ್ವಲ್ಪ ಬಿಡುವು ಕೊಡುತ್ತದೆ ಅನ್ನೋ ಭರವಸೆಯಲ್ಲಿ, ಜಾನನ ಹೆಜ್ಜೆ ಗುರುತುಗಳ ಹಿಂದೆಯೇ ಹೆಜ್ಜೆ ಹಾಕುತ್ತ, ಬ್ಯಾಣ, ಬೇಲಿ, ಗದ್ದೆಗಳನ್ನು ದಾಟಿ ಅವನ ಮನೆ ಹತ್ತಿರ ತಲುಪಿದೆ. ಚಿಕ್ಕಂದಿನಿಂದಲೂ ಪರಿಚಯವಿದ್ದ, ಅವರ ಕೇರಿಯಲ್ಲಿ ನಮ್ಮಲ್ಲಿರುವಂತೇ ಚಿಕ್ಕ ಕೊಟ್ಟಿಗೆ, ಒಂದಷ್ಟು ಹೂ ಗಿಡಗಳು, ಕೋಳಿ ಅದರ ಮರಿಗಳೆಲ್ಲವೂ ಇದ್ದು, ಸುಸ್ಥಿರ ಬದುಕನ್ನು ಕಟ್ಟಿಕೊಂಡಿದ್ದರು. ಅಲ್ಲಿಂದ ಅವನಿಗೆ ಸದ್ದು ಕೇಳುತ್ತಿದ್ದ ಮರದ ಕಡೆ ಕರೆದೊಯ್ದು, "ಅಮ್ಮಾ, ದಿನಾ ಇಲ್ಲಿ ಹತ್ತು ಹತ್ತೂವರೆ ಹೊತ್ತಿಗೆ ಬರೋದು" ಅಂತ ಸಮಯವನ್ನೂ

ಅಷ್ಟೂ ವಿಶ್ವಾಸದಿಂದ ಹೇಳಿದ. ಹಾಗೆ ಅಲ್ಲೇ ನಿಲ್ಲುವುದರ ಬದಲು ಮರ ಕಾಣುವ ದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿ ಬಂದು ಇಬ್ಬರೂ ಕುಳಿತೆವು. ಅವನು ತೋರಿಸಿದ್ದು ಸಿಡಿಲು ಬಡಿದು ಒಣಗಿ ನಿಂತಿದ್ದ ಒಂದು ತೆಂಗಿನ ಮರವನ್ನು. ಅದು ಬಹಳ ಎತ್ತರವಾಗಿದ್ದು, ಒಂದಷ್ಟು ರಂಧ್ರಗಳು ಇದ್ದಿದ್ದನ್ನು ಕಂಡಾಗ, ಇವನು ಹೇಳುತ್ತಿರುವುದೂ, ನಾನು ನೋಡಲು ಹವಣಿಸುತ್ತಿರುವುದೂ ಒಂದು ಮರಕುಟಿಗವೇ ಎಂದು ಖಚಿತವಾಯಿತು. ಬಂದು ಕೂತಲ್ಲಿಂದ ಅವನು ಎರಡು ಸುತ್ತು ಎಲೆ ಅಡಿಕೆ ತಿಂದು ಮುಗಿಸಿದ್ದರೂ, ಬರಬೇಕಾದವರು ಇನ್ನೂ ಬಂದಿರಲಿಲ್ಲ. ಪಾಪ, ಅವನ ಬೆಳಗಿನ ಸಮಯವನ್ನೆಲ್ಲಾ ಹಾಳು ಮಾಡುತ್ತಿದ್ದೇನೆಂದು ಎನಿಸಿ, ಅವನಿಗೆ ಹೋಗಲು ಹೇಳಿದೆ. "ಅಯ್ಯೋ, ಈಗಲೇ ಬರ್ತದೆ ನೋಡಿ, ಜಾಸ್ತಿ ಟೈಮ್ ಏನಿಲ್ಲ" ಎಂದು ಹೇಳಿ, ಅವನು ಮಾತು ಮುಗಿಸುವುದರಲ್ಲಾಗಲೇ, ಅವನ ಬಾಯಿಂದಲೇ ವರ್ಣಿಸಲ್ಪಟ್ಟ ಕಪ್ಪು - ದೊಡ್ಡ ಹಕ್ಕಿ, ಆ ಪಾಳು ಮರವನ್ನೇರಿತ್ತು. ಊಹಿಸಿದಂತೆಯೇ ಮರಕುಟಿಗಗಳಲ್ಲೇ ದೊಡ್ಡದೆಂದು ಸುಲಭವಾಗಿ ಹೇಳಬಹುದಾದ "ಹೆಮ್ಮರಕುಟಿಗ" (White-bellied Woodpecker) *Dryocopus javensis* ಅದಾಗಿತ್ತು. ತನ್ನ ದಿನನಿತ್ಯದ ಕರ್ಮವೇ ಇದೆಂಬಂತೆ ಬಡಗಿ ಕೆಲಸವನ್ನು ಬರುತ್ತಿದ್ದಂತೆಯೇ ಶುರುಮಾಡಿತು. ಕುಟ್ಟುತ್ತಾ, ಕುಟ್ಟುತ್ತಾ ಕೆಳಗಿಂದ ಮೇಲಕ್ಕೆ ಹೋಗಿ, ಮೇಲಿಂದ ಕೆಳಕ್ಕೆ ಬಂದು ಮರಕ್ಕೆ ಒಂದು ಸುತ್ತು ಹಾಕಿತು. ಬೇರೆ ಯಾವ ಸದ್ದೂ ಅಷ್ಟು ಇರದಿದ್ದರಿಂದ ಇದರ ಕುಟ್ಟುವ ಸದ್ದು ಜೋರಾಗಿ ಎಲ್ಲಾ ಕಡೆ ಪ್ರತಿಧ್ವನಿಸುತ್ತಿತ್ತು. ಅಂದು ತನ್ನ ತಲೆ ಮೇಲೆ ಮಬ್ಬಾದ ಬೆಳಕಲ್ಲಿ ಕಣ್ಣಾಮುಚ್ಚಾಲೆ ಆಡಿದ ಹಕ್ಕಿಯೂ ಇದೆ ಎಂದು ಸ್ಪಷ್ಟವಾಗಿ ಈಗ ಹೇಳಬಲ್ಲವಳಾಗಿದ್ದೆ. ಬಂದು ಕೂತ ಗಳಿಗೆಯಿಂದ, ಆ ಮರದ ಇನ್ನೊಂದು ಕಡೆಗೇ ತುಂಬಾ ಹೊತ್ತು ಕುಟ್ಟುತ್ತಾ ಕೂತಿದ್ದರೂ, ಅದು ಮರಕ್ಕೆ ಒಂದು ಸುತ್ತು ಹೊಡೆಯುವಾಗ ಒಮ್ಮೆ ಸಂಪೂರ್ಣವಾಗಿ ನಮಗೆ ಕಂಡಿತು.



© ThriponaxKalinowskiiKeulemans



ಮಲೆನಾಡಿನುದ್ದಕ್ಕೂ ಕಾಣಬಹುದಾದ ಈ ಪಕ್ಷಿ ಮರಕುಟಿಗಗಳಲ್ಲೇ ಅತ್ಯಂತ ಸ್ಪಷ್ಟವಾಗಿ, ನೋಡಿದ ಕೂಡಲೇ ಗುರುತಿಸಬಹುದಾದ ಪಕ್ಷಿಯಾಗಿದೆ. ತಲೆ ಮೇಲೆ ಕೆಂಪು ಜುಟ್ಟೊಂದಿದ್ದು, ಹೊಟ್ಟೆ ಭಾಗದಲ್ಲಿ ಬಿಳಿ ಬಣ್ಣ ಹೊಂದಿರುತ್ತದೆ. ಏಷ್ಯಾದ ಉಷ್ಣವಲಯದ ಕಾಡುಗಳುದ್ದಕ್ಕೂ ಇದರ ವ್ಯಾಪ್ತಿ ಹರಡಿದೆ. ಏಷ್ಯಾದಲ್ಲಿ ಎರಡನೇ ದೊಡ್ಡ ಮರಕುಟಿಗವಾಗಿ, ನಮ್ಮ ದಕ್ಷಿಣ ಭಾರತದಲ್ಲಿರುವ ಮರಕುಟಿಗಗಳಲ್ಲಿ ದೊಡ್ಡದು ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಸಾಮಾನ್ಯವಾಗಿ ನಾನು ಕಂಡಂತೆ ತನ್ನ ಗೂಡಿನ ಆಯ್ಕೆಯಲ್ಲಿ ಸತ್ತು ಹೋದ ಅಥವಾ ಇನ್ನೇನು ಸತ್ತೇ ಹೋಗಬಹುದಾದ ಮರಗಳನ್ನೇ ಆಯ್ದುಕೊಳ್ಳುತ್ತದೆ. ಹೆಚ್ಚು ಇರುವೆ ಹಾಗು ಜೀರುಂಡೆಗಳನ್ನು ತಿನ್ನುವುದಾದರೂ, ಕೆಲವು ಹಣ್ಣುಗಳೂ ಇದರ ನೆಚ್ಚಿನ ಆಹಾರದ ಪಟ್ಟಿಯಲ್ಲಿವೆ. ಮಲೆನಾಡಿನಲ್ಲಿ ವಿಶೇಷವಾಗಿ ಕಾಣುವ ಕಂದು ಮರಕುಟಿಗ, ಚುಕ್ಕಿ ಮರಕುಟಿಗ, ಹಳದಿನೆತ್ತಿಯ ಮರಕುಟಿಗಗಳೆಲ್ಲವೂ ಇದೇ ದಾರಿಯುದ್ದಕ್ಕೂ ಹಿಂದೆ ನಾನು ಕಂಡಿದ್ದೆನಾದರೂ, ಹೆಮ್ಮರಕುಟಿಗದ ದೊಡ್ಡ ಗಾತ್ರ, ನನ್ನ ಈ ಹಕ್ಕಿಗಳ ಸಾಲಿಗೆ ಒಂದು ಹೊಸ ಮೆರಗು ನೀಡಿತ್ತು.




ಬೈನೋಕ್ಯುಲರ್ ನಲ್ಲಿ ಅದನ್ನು ಕಂಡು ಉದ್ಗಾರ ತೆಗೆದ ಜಾನ, ತಾನೂ ಹಕ್ಕಿ ತೋರಿಸಿದೆ ಎಂಬ ಖುಷಿಯಲ್ಲಿ ಹಾಗೇ ಸುತ್ತಲಿನ ಜಾಗವನ್ನೆಲ್ಲಾ ತೋರಿಸಿ, `ತುಂಬಾ ಹಕ್ಕಿಗಳು ಬರ್ತಾವೆ ಇಲ್ಲೆಲ್ಲಾ...! ತೋರುಸ್ತೀನಿ' ಎಂದಾಗ ಮತ್ತೊಮ್ಮೆ ಬಿಡುವು ಮಾಡಿಕೊಂಡು ಬರ್ತೀನಿ ಅಂತ ಹೇಳಿ ಅಲ್ಲಿಂದ ಹೊರಟೆ. ಅರ್ಧದಾರಿಯವರೆಗೆ ಬಂದು ಅಲ್ಲಿಂದ ನಮ್ಮನೆ ದಾರಿ ತೋರಿಸಿ ಅವನೂ ಅವರ ಮನೆಯ ಕಡೆ ತೆರಳಿದ. ಎಷ್ಟೋ ಸಲ ಹಕ್ಕಿಗಳ ಹುಡುಕಾಟದಲ್ಲಿ ಊಹಿಸದೇ ಇದ್ದ ಹಕ್ಕಿ ಕಣ್ಣೆದುರು ಬಂದು ಹಾರಿ ಹೋದ ಘಟನೆಗಳು ಒಂದು ರೀತಿಯಲ್ಲಿ ಮನಸ್ಸಿನ ಮುದಕ್ಕೆ ಕಾರಣವಾದರೆ, ಈ ರೀತಿ ಇಲ್ಲಿ, ಈ ಸಮಯಕ್ಕೆ ಬಂದೇ ಬರುತ್ತದೆ ಎಂದು ನಿರೀಕ್ಷೆಯಲ್ಲಿ ಕೂತು ಪಕ್ಷಿಯನ್ನು, ಅದರಲ್ಲೂ ಜಾನನೊಂದಿಗೆ ಕೂತು ಕಂಡಿದ್ದು ನನ್ನ ಅನುಭವಗಳ ಬುಟ್ಟಿಗೆ ಮತ್ತಷ್ಟು ಖುಷಿಯನ್ನೂ ಸೇರಿಸಿತ್ತು.

**ಲೇಖನ:** **ಸ್ಮಿತಾ ರಾವ್**

**ಶಿವಮೊಗ್ಗ ಜಿಲ್ಲೆ**







# ಸುಕ್ರಿ, ತುಳಸಿ ಅಜ್ಜಿಯರ ಪರಿಸರ ಪಾಠ

ಹಾಲಕ್ಕಿ ಸಮುದಾಯದವರು ಉತ್ತರಕನ್ನಡದ ಕಾಳಿ ನದಿಯಿಂದ ಶರಾವತಿ ನದಿಯ ವ್ಯಾಪ್ತಿಯವರೆಗಿನ ಕಾರವಾರ, ಅಂಕೋಲ, ಗೋಕರ್ಣ, ಕುಮಟಾ, ಹೊನ್ನಾವರ ಮುಂತಾದ ಭಾಗಗಳಲ್ಲಿ ಕಾಣಸಿಗುತ್ತಾರೆ. ಇವರು ಜೀವನಾಧಾರಕ್ಕೆ ಕೃಷಿಯನ್ನು ಅವಲಂಬಿಸಿದ್ದಾರೆ. ಯಾವುದೇ ಪ್ರಚಾರ, ಹಣದಾಸೆಯನ್ನು ಬಯಸದೇ *'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು'* ಎಂಬುದನ್ನು ಅರಿತು ಬದುಕುವ ಶ್ರಮಜೀವಿಗಳು. ಬೇರೆಲ್ಲಾ ಸಮುದಾಯಕ್ಕಿಂತ ಹಾಲಕ್ಕಿ ಒಕ್ಕಲಿಗದವರ ಉಡುಗೆ, ಆಚಾರ-ವಿಚಾರ, ಜೀವನಪದ್ಧತಿ ವಿಭಿನ್ನ. ರವಿಕೆ ಉಡದೆ ಸೀರೆಯನ್ನು ಜಡಿಕೆ ಕಟ್ಟಿ ಬಣ್ಣ ಬಣ್ಣದ ಮಣಿಸರ ಹಾಕಿಕೊಂಡು ತಾರ್ಲೆ, ಗುಮಟೆ, ಪುಗುಡಿ ಮೂಲಕ ಹಬ್ಬ ಹರಿದಿನಗಳಲ್ಲಿ, ಮದುವೆ ಸಮಾರಂಭದಲ್ಲಿ ಹಾಡುವ ಹಾಡು, ಕುಣಿತ ಅವರ ಗ್ರಾಮೀಣ ಸೊಗಡಿನ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ.




ಹಾಲಕ್ಕಿ ಸಮುದಾಯದಲ್ಲೇ ಹುಟ್ಟಿದ ಪದ್ಮಶ್ರೀ ಪುರಸ್ಕೃತೆ **ಸುಕ್ರಿ ಬೊಮ್ಮಗೌಡ** ಅವರು ನಾಡಿನ ಜಾನಪದ ಸಂಸ್ಕೃತಿ, ಪರಂಪರೆಯನ್ನು ಜನಮಾನಸದಲ್ಲಿ ಅಚ್ಚಳಿಯದಂತೆ ಮಾಡಿದ ಹಿರಿಯ ಜೀವ. ಸುಕ್ರಿ ಅಜ್ಜಿಯ ತಂದೆ ಸುಬ್ಬಣ್ಣ, ತಾಯಿ ದೇವಮ್ಮ. ಗಂಡ ಬೊಮ್ಮ ಗೌಡ.

ಇವರೆಲ್ಲರೂ ಶ್ರಮ ಜೀವಿಗಳು. ಅಜ್ಜಿಯೂ ಸಹ ಶ್ರಮದ ಬದುಕನ್ನು ಬಾಲ್ಯದಿಂದಲೇ ಕಂಡಿದ್ದರ ಪರಿಣಾಮವಾಗಿ ಮಾನವೀಯತೆಯೊಂದಿಗೆ, ಪರಿಸರಕ್ಕೆ ತಮ್ಮ ಜೀವನವನ್ನೇ ಮುಡಿಪಿಟ್ಟರು. ಬಾಳ ಪಯಣದ ತುಂಬೆಲ್ಲಾ ಬಡತನವಿದ್ದರೂ ಹಣದ ಅಭಿಲಾಷೆಯಾಗಲಿ, ಪ್ರಚಾರದ ದಾಹವಾಗಲಿ ಸುಕ್ರಿ ಅಜ್ಜಿಗೆ ಬಂದಿಲ್ಲ. ಈ ಅಜ್ಜಿಯ ವಯಸ್ಸು ಸರಿ ಸುಮಾರು 90 ವರ್ಷಗಳಿರಬಹುದು. ಅಕ್ಷರ ಅಭ್ಯಾಸ ಕಲಿಯದಿದ್ದರು ಇವರು ನಿಸರ್ಗದ ಒಡಲ ಕೂಗು, ಹೆಣ್ಣಿನ ಮನದಾಳದ ಸಂಕಟ, ಸ್ತ್ರೀ ಶೋಷಣೆ, ಸಾಮಾಜಿಕ ಅಸಮಾನತೆಯನ್ನು 4000ಕ್ಕೂ ಹೆಚ್ಚಿನ ಜನಪದ ಹಾಡಿನ ಮೂಲಕ ಬಿಂಬಿಸಿದ್ದಾರೆ. ದುಡಿದ ಹಣವನ್ನು ಕುಡಿತವೆಂಬ ಚಟಕ್ಕೆ ವ್ಯರ್ಥ ಮಾಡುವ ಹಾಲಕ್ಕಿ ಯುವಕರನ್ನು ಕಂಡ ಸುಕ್ರಿ ಅಜ್ಜಿಯು, ತಮ್ಮ ಯುವ ಸಮುದಾಯ ಎಲ್ಲೋ ಹಾದಿ ತಪ್ಪುತ್ತಿದೆಯೆಂದು ಮದ್ಯಪಾನ ಚಳುವಳಿ ನಡೆಸಿ ಯಶಸ್ವಿಯಾಗಿದ್ದಾರೆ. ಶಾಲಾ ಮೆಟ್ಟಿಲನ್ನೆ ತುಳಿಯದ ಈ ಅಜ್ಜಿಯನ್ನು ಕರ್ನಾಟಕ ವಿಶ್ವವಿದ್ಯಾಲಯವು ಜಾನಪದ ವಿಭಾಗದ ಉಪನ್ಯಾಸಕಿಯಾಗಿ ನೇಮಿಸಿದೆ! ಅಜ್ಜಿ ಮನೆಗೆ ಸ್ವತ: ನಾನೇ ಕಳೆದ ಮಾರ್ಚ್ ತಿಂಗಳಲ್ಲಿ ಹೋಗಿದ್ದೆ. ಅಜ್ಜಿಯಲ್ಲಿರುವ ಲವಲವಿಕೆ, ಕಾಯಕನಿಷ್ಠೆ, ಸ್ಮರಣಶಕ್ತಿ, ಮುಗ್ಧ ನಗು, ಸರಳತೆ ಅವರು ನೀಡಿದ ನಿರಪೇಕ್ಷಿತ ಪ್ರೀತಿ ಎಂದಿಗೂ ಅವಿಸ್ಮರಣೀಯ. ಎಲ್ಲೆ ಹೋದರೂ, ಯಾವ ಪ್ರತಿಷ್ಠಿತ ವ್ಯಕ್ತಿ ಮುಂದೆ ನಿಂತರೂ ಅವರ ಹಾಲಕ್ಕಿ ಶೈಲಿಯ ಉಡುಗೆಯಲ್ಲಾಗಲಿ, ಭಾಷೆಯಲ್ಲಾಗಲಿ ಬದಲಾವಣೆ ಎಂಬುದಿಲ್ಲ. ಎಂದಿಗೂ ತಮ್ಮ ಸಮುದಾಯದ ಆಚಾರ, ಸಂಪ್ರದಾಯಕ್ಕೆ ಬದ್ಧರಾಗಿ ಎಲ್ಲರಿಗೂ ಮಾದರಿಯಾಗಿದ್ದಾರೆ. ಅಜ್ಜಿಗೆ ಇರುವ ಆಸೆ ಎಂದರೆ, ತನ್ನೆಲ್ಲಾ ಹಾಡುಗಳು ಕೃತಿ ರೂಪದಲ್ಲಿ ಪ್ರಕಟವಾಗಿ ಮುಂಬರುವ ಪೀಳಿಗೆ ಓದುವಂತಾಗಬೇಕು ಎಂಬುದಾಗಿದೆ. ಹೀಗಾದಾಗ ಮಾತ್ರಾ ಹಾಲಕ್ಕಿ ಸಮುದಾಯದ ಜಾನಪದ ಸಾಹಿತ್ಯ ಶಾಶ್ವತವಾಗಿ ಉಳಿಯಲು ಸಾಧ್ಯ.



© ಅಪುಲ್ ಆಳ್ವಾ ಇರಾ




ಇನ್ಸೋರ್ವ ಹಾಲಕ್ಕಿ ಸಮುದಾಯದ ಪದ್ಮಶ್ರೀ ಪುರಸ್ಕೃತೆ **ತುಳಸಿ ಗೌಡ**. ಇವರು ಅಂಕೋಲ ತಾಲೂಕಿನ ಹೊನ್ನಳ್ಳಿ ಗ್ರಾಮದವರು. ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ಲಕ್ಷಕ್ಕೂ ಹೆಚ್ಚು ಸಸಿ ನೆಟ್ಟು ಸಲುಹಿದ ಹಿರಿ ಜೀವ. ಇವರ ವ್ಯಕ್ತಿತ್ವವೇ ಅಂತಹದ್ದು, ಮಾತು ಕಡಿಮೆ ಕೆಲಸ ಹೆಚ್ಚು... ತುಳಸಿ ಅಜ್ಜಿಯು ಯಾವ ಬಿರುದು, ಸನ್ಮಾನದ ಹಿಂದೆ ಹೋದವರಲ್ಲ, ತನ್ನ ಪಾಡಿಗೆ ಗಿಡ ನೆಟ್ಟು ಮರವಾಗಿ ಬೆಳೆಯುವ ತನಕ ಮಕ್ಕಳಂತೆ ಸಲುಹಿದವರು. ಒಮ್ಮೆ ಅಜ್ಜಿಯ ಕಾಯಕ ನಿಷ್ಠೆ ಗಮನಿಸಿದ ಅಂದಿನ ಅರಣ್ಯ ಅಧಿಕಾರಿ **ಯಲ್ಲಪ್ಪ ರೆಡ್ಡಿ** ಯವರು ಮಾಸ್ತಿಕಟ್ಟೆ ಅರಣ್ಯ ವಲಯದಲ್ಲಿ ಸಸಿ ನೆಡುವ ಕೆಲಸವೊಂದನ್ನು ಕೊಡಿಸಿದರು. ಇವರಿಗಿದ್ದ ವೃತ್ತಿ ಗೌರವ, ಸಸಿ ಪೋಷಣೆ, ಪರಿಸರ ಕಾಳಜಿಯ ಮುಂದೆ ಸಮಯದ ಅರಿವಿರದೆ ಇಲಾಖಾ ವೇಳೆ ಹೊರತಾಗಿಯೂ ಹೆಚ್ಚು ಹೆಚ್ಚು ಕಾರ್ಯನಿರ್ವಹಿಸುತ್ತಿದ್ದರು. ಕಾಡಿನ ಸುತ್ತೆಲ್ಲಾ ತಿರುಗಿ ಅಪರೂಪದ ಬೀಜ ಮತ್ತು ಗಿಡಗಳನ್ನು ಸಂಗ್ರಹಿಸಿ ನೆಡುತ್ತಿದ್ದರು. ನೋಡು ನೋಡುತ್ತಿದ್ದಂತೆ ಮಾಸ್ತಿಗಟ್ಟ, ಹೊನ್ನಾಳಿ, ವಜ್ರಹಳ್ಳಿ, ಅಡಗೂರು, ಅಗಸೂರು, ಕಲ್ಲೇಶ್ವರ, ದೊಂಗ್ರಿ ಹೀಗೆ ಅಲ್ಲಿಯ ಖಾಲಿ ಭೂಮಿಯ ತುಂಬೆಲ್ಲ ತುಳಸಿ ಅಜ್ಜಿ ನೆಟ್ಟಿರುವ ಗಿಡ ಮರಗಳು ಕಾಣಸಿಗುತ್ತವೆ. ಮತ್ತಿಘಟ್ಟ ಅರಣ್ಯ ನರ್ಸರಿಯಲ್ಲಿ ಸೇವೆ ಮಾಡಿ ನಿವೃತ್ತಿಯಾದರೂ ಇಂದಿನ ಯುವಕರಿಗೆ ತಾನು ನೆಟ್ಟಿರುವ ಸಸಿಗಳ ಜಾತಿ, ಬೇಕಾಗುವ ನೀರಿನ ಪ್ರಮಾಣ, ಯಾವ ಸಮಯದಲ್ಲಿ ಮರ ಬೀಜ ಬಿಡುತ್ತದೆ, ಹೇಗೆ ನೆಟ್ಟು ಬೆಳೆಸಬೇಕೆಂಬುದರ ಕುರಿತಾಗಿ ಮಾರ್ಗದರ್ಶನ ನೀಡುತ್ತಾರೆ. ಈ ಕಾರಣದಿಂದಾಗಿ ತುಳಸಿ ಅಜ್ಜಿ "ಅರಣ್ಯ ವಿಶ್ವಕೋಶ" ಎಂದೇ ಜನಮನದಲ್ಲಿ ಪ್ರಸಿದ್ಧರಾಗಿದ್ದಾರೆ.

17 ನೇ ವಯಸ್ಸಿನಲ್ಲಿಯೇ ಪತಿ ಗೋವಿಂದ ಗೌಡ ರನ್ನು ಕಳೆದುಕೊಂಡರೂ, ಕಡು ಬಡತನದಲ್ಲಿ ಕೇವಲ 1.25 ಪೈಸೆಗೂ ಕಡಿಮೆ ದಿನಕೂಲಿ ಸಿಗುತ್ತಿದ್ದರೂ ಕೂಡಾ ಪರಿಸರದ ಕಾಳಜಿಯಿಂದಾಗಿ ಕೆಲಸ ಬಿಡಲಿಲ್ಲ. ಬರಡು ಭೂಮಿಯನ್ನು ಹಸಿರಾಗಿಸಿ 'ವೃಕ್ಷ ಮಾತೆ' ಎನಿಸಿಕೊಂಡರು. ಇವರ ಕಾಯಕ ನಿಷ್ಠೆಗೆ "**ಪದ್ಮಶ್ರೀ ಪ್ರಶಸ್ತಿ**", ಕೇಂದ್ರ ಸರ್ಕಾರ ನೀಡುವ "**ಪ್ರಿಯ ದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ**" ಮತ್ತು ಪರಿಸರದ ಕಾಯಕಕ್ಕೆ "**ರಾಜ್ಯೋತ್ಸವ ಪ್ರಶಸ್ತಿ**" ದೊರಕಿವೆ.

ಕಳೆದ 6 ದಶಕಗಳಿಂದ ಪ್ರಕೃತಿ ಸೇವೆಯ ಸಾರ್ಥಕತೆ ಕಂಡುಕೊಂಡರು ತುಳಸಿ ಅಜ್ಜಿ ಎಲ್ಲೆ ಹೋದರು ಮೂಲತನವನ್ನು ಬಿಡದೆ ಸಂಪ್ರದಾಯಕ್ಕೆ ಬದ್ಧವಾದ ಉಡುಗೆ ಶೈಲಿಯನ್ನೇ ಪಾಲಿಸುತ್ತಾರೆ. ಬೆಳಿಗ್ಗೆ, ಸಂಜೆಯ ಸಮಯ ಸಿಕ್ಕಾಗಲೆಲ್ಲ ತನ್ನ ಗಿಡ ಮರಗಳು ಇರುವ ಜಾಗಕ್ಕೆ ಹೋಗುತ್ತಾರೆ. ಅದರ ಪೋಷಣೆಯಲ್ಲಿ ತೋಡಗುತ್ತಾರೆ! ಇದು ಅಜ್ಜಿಯ ಕಾಯಕ ನಿಷ್ಠೆ. ತುಳಸಿ ಅಜ್ಜಿಗೆ ಇಂದಿಗೂ ತಾನು ನೆಟ್ಟ ಗಿಡದ ಸರಿಯಾದ ಲೆಕ್ಕ ಇಲ್ಲ. ತುಳಸಿ ಅಜ್ಜಿಯನ್ನೊಮ್ಮೆ ಭೇಟಿ ಆದಾಗ ನನಗೆ ಹೇಳಿದ್ದು "ನಾವ್ ಎಷ್ಟು ಗಿಡ ನೆಟ್ಟಿದ್ದೇವೆ ಎಂಬುದು ಮುಖ್ಯ ಅಲ್ಲ, ನೆಟ್ಟ ಗಿಡಗಳೆಷ್ಟು ಬದುಕುಳಿದಿವೆ ಎಂಬುದು ಮುಖ್ಯ" ಎಂದಿದ್ದರು. ಅಜ್ಜಿಯಿಂದ ನಾ ಕಲಿತು ಮರೆಯಲಾಗದ ಮೌಲ್ಯಯುತ ಮಾತಿದು. ಅಕ್ಷರ ಜ್ಞಾನವಿಲ್ಲದಿದ್ದರೂ ತುಳಸಿ ಅಜ್ಜಿಯ ಕಾಯಕ ನಿಷ್ಠೆ, ಪರಿಸರ ಕಾಳಜಿ, ಸಸ್ಯ ಪೋಷಣೆಗೆ ತೋರುವ ಉತ್ಸುಕತೆಯನ್ನು ನಾವೆಲ್ಲರೂ ತುಳಸಿ ಅಜ್ಜಿಯನ್ನು ನೋಡಿ ಕಲಿಯಬೇಕಿದೆ.

**ಲೇಖನ: ಅನ್ನಪೂರ್ಣ ಬೈಂದೂರು**

**ಉಡುಪಿ ಜಿಲ್ಲೆ**



© ಅಪುಲ್ ಆಳ್ವಾ ಇರಾ



© ಅಪುಲ್ ಆಳ್ವಾ ಇರಾ




# ಕೆರೆ ಹಬ್ಬ

ಕಾಳೇಶ್ವರಿ ಗ್ರಾಮದ ಪುರಾತನ ಕೆರೆಯನ್ನು ಭೂ ಕಳ್ಳರಿಂದ ರಕ್ಷಿಸಲು ಪಣತೊಟ್ಟ ಕಾಳೇಶ್ವರಿ ಗ್ರಾಮದ ಯುವಕರೊಂದಿಗೆ, ವೈಲ್ಡ್‌ಲೈಫ್ ಕನ್ಸರ್ವೇಷನ್ ಗ್ರೂಪ್ (WCG) ಸೇರಿ ಒತ್ತುವರಿಯಾದ ಕೆರೆಯ ಜಾಗವನ್ನು ಬಿಡಿಸಿಕೊಡಿ ಎಂದು ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾಧಿಕಾರಿವರೆಗೂ ಅರ್ಜಿಗಳನ್ನು ಕೊಟ್ಟು ಬಂದೆವು. ಕಳೆದ 10 ವರ್ಷಗಳಿಂದ ಒತ್ತುವರಿಯಾದ ಕೆರೆ ಮಾತ್ರ ತೆರವು ಆಗಿರಲಿಲ್ಲ. ಹಾಗೆಂದು ಸುಮ್ಮನೆ ಬಿಟ್ಟುಬಿಡುವ ಜಾಯಮಾನದವರಲ್ಲ ಈ ನಮ್ಮೂರಿನ ಈ ಹುಡುಗರು.

ಕಾಳೇಶ್ವರಿ ಗ್ರಾಮಕ್ಕೆ ಮಾಜಿ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿಗಳಾಗಿದ್ದ ರಾಮಯ್ಯನವರು ಇತ್ತೀಚೆಗೆ ಊರಿಗೆ ಭೇಟಿಕೊಟ್ಟಿದ್ದರು. ಆಗ ಊರಿನ ಯುವಕರು ಕೆರೆಯನ್ನು ಉಳಿಸಲು ತಾವು ಅಡಿಯಿಂದ ಮುಡಿಯವರೆಗೂ ಸಲ್ಲಿಸಿದ್ದ ಅರ್ಜಿಗಳ ಕಂತೆಯನ್ನು ಜಂಟಿ ಕಾರ್ಯದರ್ಶಿಗಳ ಕೈಗೆ ಇಟ್ಟು ಕೆರೆಯನ್ನು ಉಳಿಸಿಕೊಡಲು ಕೇಳಿಕೊಂಡರು. ಅವರು ಮನಸ್ಸು ಮಾಡಿ ಸರ್ಕಾರದ ಫೈಲುಗಳಲ್ಲಿ ಹುದುಗಿದ್ದ ಈ ನಾಲ್ಕೂವರೆ ಎಕರೆ ಕೆರೆಯನ್ನು ಮೇಲೆ ತಂದು ಅಧಿಕಾರಿಗಳಿಗೆ ತೋರಿಸಿ ಒತ್ತುವರಿಯನ್ನು ತೆರವುಗೊಳಿಸಲು ಸೂಚಿಸಿದರು. ನಂತರ ತುಂಬಾ ಕಾರ್ಯ ನಿರತವಾಗಿರುವ ಇಲಾಖೆಯಾದ ಕಂದಾಯ ಇಲಾಖೆಯ ಸರ್ವೇ ಮಾಡುವವರು ಒಂದು ಭಾನುವಾರ ಬಂದರು. ಕೆರೆಯ ಸುತ್ತ ಇದ್ದ ಹಳೆಯ ಬಾಂದು ಕಲ್ಲುಗಳನ್ನು ಹುಡುಕಿ ಡಿಜಿಟಲ್ ಸರ್ವೇ ಮಾಡಿ, ಕೆರೆಯ ಗಡಿಯನ್ನು ಗುರುತಿಸಿ ಕಲ್ಲುಗಳನ್ನು ನೆಟ್ಟರು. ಆ ಸರ್ವೇ ಅಧಿಕಾರಿಗಳು ಅತ್ತ ಹೋಗುತ್ತಿದ್ದಂತೆ ಇತ್ತ ಒತ್ತುವರಿದಾರರು ಬಂದು "ನೀವೇನು ನಮಗೆ ನೋಟಿಸ್ ಕೊಟ್ಟು ಸರ್ವೇ ಮಾಡಿದ್ದೀರಾ? ಕಲ್ಲು ಹಾಕಲು ನೀವು ಯಾರು?" ಎಂದು ಹೇಳಿ ಸರ್ವೇ ಗುರುತು ಮಾಡಿದ್ದ ಕಲ್ಲುಗಳನ್ನು ಕಿತ್ತು ಬಿಸಾಕಿ ಮತ್ತೊಂದು ತಪ್ಪು ಮಾಡಿಯೇ ಬಿಟ್ಟರು!







ಈ ವಿಚಾರವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೂಲಕ ಮೇಲಿನ ಅಧಿಕಾರಿಗಳಿಗೆ ತಿಳಿಸಲಾಯಿತು. ಸರ್ಕಾರ ಜೆಸಿಬಿ ಗಳ ಸಮೇತ ಬಂದಿತು. ಕೆರೆಯ ಅಂಗಳದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ರಸ್ತೆಯನ್ನು ದೂಳೆಬ್ಬಿಸಿ, ಸರ್ವೇ ಕಲ್ಲುಗಳನ್ನು ಮತ್ತೆ ನೆಟ್ಟು ಹಳದಿ ಬಣ್ಣ ಬಳೆದು ಕಾಂಪೌಂಡ್ ಹಾಕಿ ತಂತಿ ಬೇಲಿಯನ್ನು ಅಳವಡಿಸಲಾಯಿತು. ಕೆರೆಯ ಖಾಲಿ ಅಂಗಳದಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವ ಕಾರ್ಯಕ್ರಮವನ್ನು ನಮ್ಮ ಡಬ್ಲ್ಯೂ.ಸಿ.ಜಿ ಹಾಗೂ ಸ್ನೇಹ ಸಂಪದ ತಂಡ ವಹಿಸಿಕೊಂಡಿತು. ವಿವಿಧ ಪ್ರಭೇದದ ಸ್ಥಳೀಯ ಗಿಡಗಳೇ ಆದ ಬಸರಿ, ಆಲ, ಗೋಣಿ, ಅತ್ತಿ, ಅರ್ಜುನ, ಹೊಳೆಮತ್ತಿ ಇತರೆ ಹಲವು ಪ್ರಭೇದದ ಗಿಡಗಳನ್ನು ಸಂಗ್ರಹಿಸಲು ಬಯಸಿದ್ದ ನಮಗೆ, ಚನ್ನಪಟ್ಟಣ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳಾದ ಮೊಹಮ್ಮದ್ ಮನ್ಸೂರ್ ಸರ್ ಅವರು, ಶಿವನಹಳ್ಳಿಯ ರಾಮಕೃಷ್ಣ ಮಿಷನ್ ನ ಸ್ವಾಮೀಜಿಯವರು ಗಿಡಗಳನ್ನು ನೀಡುವಲ್ಲಿ ನಮಗೆ ನೆರವಾದರು. ನಮ್ಮ ತಾಲೂಕಿನ ಸಾಮಾಜಿಕ ಅರಣ್ಯ ಇಲಾಖೆಯ ವತಿಯಿಂದ ಕೆಲವು ಹೊಂಗೆ ಗಿಡಗಳನ್ನು ತಂದುಕೊಟ್ಟರು. ಕೆರೆಯ ಅಂಗಳದಲ್ಲಿ ಗುಂಡಿಗಳನ್ನು ತೋಡಲಾಗಿತ್ತು. ಸ್ವಯಂಸೇವಕರು, ಹಳ್ಳಿಯ ಜನರು, ಮಕ್ಕಳು, ವಿದ್ಯಾರ್ಥಿಗಳು ಮತ್ತು ನಗರದಲ್ಲಿನ ಪರಿಸರ ಪ್ರಿಯರು, ಎಲ್ಲರಿಗೂ ಗಿಡ ನೆಡುವ ಕಾರ್ಯಕ್ರಮ ಇದೆ ಎಂದು ತಿಳಿಸಲಾಯಿತು. ಕಳೆದ 22 ನೇ ಆಗಸ್ಟ್ 2021 ರ ಭಾನುವಾರದಂದು ಎಲ್ಲರೂ ಬಂದರು. ಮಾಜಿ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಶ್ರೀ ಎಂ. ರಾಮಯ್ಯ ನವರು, ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ತಾಲ್ಲೂಕು ಪಂಚಾಯಿತಿಯ ಸದಸ್ಯರು, ಸ್ನೇಹ ಸಂಪದ ತಂಡದವರು, ಸುತ್ತಮುತ್ತಲಿನ ಗ್ರಾಮಸ್ಥರು, ಡಬ್ಲ್ಯೂ.ಸಿ.ಜಿ ಸ್ವಯಂಸೇವಕರು ಹಾಗೂ ನಗರದ ಪರಿಸರ ಆಸಕ್ತರು ಈ ಕಾರ್ಯಕ್ರಮಕ್ಕೆ ಬಂದರು. ಕೆರೆಯ ಸುತ್ತಮುತ್ತ ಬಿದ್ದಿದ್ದ ಪ್ಲಾಸ್ಟಿಕ್, ಗಾಜು ಇತರೆ ಕಸವನ್ನು ಹೆಕ್ಕಿ ಸಂಗ್ರಹಿಸಲಾಯಿತು.



ನಮ್ಮ ಪರಿಸರದಲ್ಲಿ ಉಂಟಾಗುತ್ತಿರುವ ಹವಾಮಾನ ವೈಪರೀತ್ಯ ಹಾಗೂ ನೀರಿನ ಕೊರತೆ ನೀಗಿಸಲು ಕೆರೆಯನ್ನು ಉಳಿಸಿ, ಗಿಡಗಳನ್ನು ಬೆಳೆಸಬೇಕೆಂದು ಪಣತೊಟ್ಟು ಎಲ್ಲರೂ ಸಂತೋಷದಿಂದ ನೆಡುವುದಕ್ಕೆ ಸಜ್ಜಾದರು. ಗಿಡ ನೆಡುವ ಖುಷಿಯು ಎಲ್ಲರ ಮನದಲ್ಲಿಯೂ ಮೂಡಿತ್ತು. ಒಂದು ಉತ್ತಮ ಸಾರ್ಥಕ ಭಾವದ ವಾತಾವರಣ ನಿರ್ಮಾಣವಾಗಿತ್ತು. ಗುಂಡಿಯಲ್ಲಿ ಮೊದಲೇ ಇಟ್ಟಿದ್ದ ಗಿಡಗಳನ್ನು ಎಲ್ಲರೂ ಸೇರಿ ನೆಟ್ಟರು. ನೆಟ್ಟ ಗಿಡಗಳನ್ನು ಪೋಷಿಸಿ ಬೆಳೆಸಿ ಮುಂದಿನ ವರ್ಷವೂ ಕೆರೆ ಹಬ್ಬ ಮಾಡೋಣವೆಂದು ನಿರ್ಧರಿಸಲಾಯಿತು. ನೆಟ್ಟ 300 ಗಿಡಗಳಿಗೂ ಕೆರೆಯಿಂದಲೇ ನೀರುಣಿಸಿ, ನೆರೆದಿದ್ದ ಸ್ವಯಂಸೇವಕರು ರುಚಿಯಾದ ಭೋಜನ ಸವಿದು ಎಲ್ಲರೂ ನಿರ್ಗಮಿಸಿದರು.










ಸಂಜೆ ಬಿಳಿ ಕತ್ತಿನ ಜೋಡಿ ಬಾತುಕೋಳಿಗಳು ಕೆರೆಯ ನೀರಿನಲ್ಲಿ ಸ್ವಚ್ಛಂದವಾಗಿ ಈಜುತ್ತಿದ್ದವು. ನೀರು ಕಾಗೆಯೊಂದು ರೆಕ್ಕೆಯಗಲಿಸಿ ಸಂಜೆ ಕಿರಣಗಳಿಗೆ ಮೈಯೊಡ್ಡಿ ನಿಂತಿತ್ತು. ಕೆರೆಯ ಏರಿಯ ಮೇಲೆ ದೃಢವಾಗಿ ನಿಂತಿದ್ದ ಅತ್ತಿ ಮರದ ಪೊಟರೆಯಲ್ಲಿ ಹಾಲಕ್ಕಿ ಏನೋ ಶಕುನ ನುಡಿಯುತ್ತಿತ್ತು. ಗಿಡ ನೆಟ್ಟ ಆ ರಾತ್ರಿಯೇ ಜೋರು ಮಳೆ ಸುರಿಸಿ ಪ್ರಕೃತಿಯು ಈ ಹುಡುಗರ ಕಾರ್ಯಕ್ಕೆ ಸೈ ಎಂದಿತ್ತು.

'ಈ ಕೆರೆ ನಮ್ಮದು' ಹಾಗೂ 'ಕೆರೆ ಹಬ್ಬ' ಯೋಜನೆಗೆ ಧನ ಸಹಾಯದ ಮೂಲಕ WCG ತಂಡದ ಜೊತೆ ಕೈ ಜೋಡಿಸಿದ ಸ್ನೇಹ ಸಂಪದ ತಂಡಕ್ಕೂ, ಎಲ್ಲಾ ನಡೆಯಲ್ಲೂ ಜೊತೆಯಾಗಿದ್ದ ಮಂಟಪ ಗ್ರಾಮ ಪಂಚಾಯಿತಿ ಸದಸ್ಯರಿಗೂ, ಕಾಳೇಶ್ವರಿ ಗ್ರಾಮಸ್ಥರಿಗೂ ಧನ್ಯವಾದಗಳು.




**ಲೇಖನ: ಶಂಕರಪ್ಪ ಕೆ. ಪಿ.**

**ಡಬ್ಲ್ಯು. ಸಿ. ಜಿ. ಬೆಂಗಳೂರು ಜಿಲ್ಲೆ**




ವಿವಿ ಅಂಕಣ

# ದುಬಾರಿ ದುಂಬಿ

ಬಿ. ಎಮ್. ಟಿ. ಸಿ ಬಸ್ಸಿನ ಕೊರೆಯುವ ಕಿಟಕಿ ಗಾಜಿಗೆ ಕಿವಿತಾಗಿ ಎಚ್ಚರವಾಯ್ತು. ಬಸ್ಸು ಕುಲುಕುತ್ತಾ ಇನ್ನೂ ಕಾಡಿನ ದಾರಿಯಲ್ಲೇ ಸಾಗುತ್ತಿತ್ತು. ಮಾರ್ಕೆಟಿಗೆ ಹೋಗಿ ನಂತರ ಯಾರದೋ ಹೊಟ್ಟೆ ಸೇರಬೇಕಿದ್ದ ಟೊಮೋಟ ಹಣ್ಣಿನ ಚೀಲಗಳು ಬಳುಕುವ ಬಸ್ಸಿನ ಹಾಡಿಗೆ ತಾಳ ಹಾಕುತ್ತಿದ್ದವು. ಮಾರ್ಕೆಟ್ ಸಮೀಪಿಸುತ್ತಿದ್ದಂತೆ ಇಲ್ಲಿಯವರೆಗೆ ಬಸ್ಸಿನಲ್ಲಿದ್ದ ಮೌನವೆಲ್ಲಾ ಕರಗಿ ಗಜಿ-ಬಿಜಿಯ ಸದ್ದು ದುಂಬಿಯಂತೆ ಕಿವಿಯ ಬಳಿ ಗುಯ್ಗುಡುತ್ತಿತ್ತು. ಬಸ್ಸು ನಿಂತು ಜನರೆಲ್ಲಾ ಇಳಿಯುವುದರೊಳಗೆ ನಮ್ಮ ಚೀಲಗಳನ್ನು ಇಳಿಸಿಬಿಡಬೇಕಿತ್ತು. ನನ್ನ ಅಪ್ಪನ ಬಲವಾದ ಕೈಗಳನ್ನು ಗಟ್ಟಿಯಾಗಿ ಹಿಡಿದ ಚೀಲಗಳು ಒಂದೊಂದಾಗಿ ಇಳಿದು, ಮೈ ಮುರಿಯುತ್ತಾ ಮಾರ್ಕೆಟ್ ನೋಡುತ್ತಿದ್ದವು. ಅಷ್ಟರಲ್ಲಿ ಎಳೆಯುವ ಎರಡು ಚಕ್ರದ ಗಾಡಿಯೊಂದಿಗೆ ಬಂದ ಅಪರಿಚಿತ ವ್ಯಕ್ತಿ ಅವುಗಳ ಸ್ವಾತಂತ್ರ್ಯ ಕಸಿದುಕೊಂಡಂತೆ ತುಂಬತೊಡಗಿದನು. ಮೊದಲ ಬಾರಿಗೆ ಇದನ್ನೆಲ್ಲಾ ನೋಡುತ್ತಿದ್ದ ನನಗೆ, ಇದೊಂದು ವಿಭಿನ್ನ ಪ್ರಪಂಚ ಎಂದು ಅರಿವಾಯ್ತು. ನಮ್ಮ ಹಳ್ಳಿಯ ಬೀದಿಗಳನ್ನೇ ಹೆಚ್ಚಾಗಿ ನೋಡದ ನಾನು, ಇಂದು ಬೆಂಗಳೂರನ್ನು ನೋಡಿದ ಬಗ್ಗೆ ನನ್ನ ಸ್ನೇಹಿತರಿಗೆ ವಿವರಿಸಲೇಬೇಕೆಂದು ಆಗಲೇ ತೀರ್ಮಾನಿಸಿಬಿಟ್ಟೆ. ಇವೆಲ್ಲಾ ತಲೆಯಲ್ಲಿ ಓಡುತ್ತಿರುವಾಗಲೇ ನಾನು ಮತ್ತು ನನ್ನ ಅಪ್ಪ ಆ ಎರಡು ಚಕ್ರದ ಗಾಡಿಯ ಹಿಂದೆ ಓಡುತ್ತಿದ್ದೆವು. ಮುನಿದ ನಾಗರನಂತೆ ಬುಸುಗುಟ್ಟುತ್ತಾ, ದಾರಿ ಕೇಳಿ ಗಾಡಿ ಎಳೆದುಕೊಂಡು






ಆತ ನುಗ್ಗುತ್ತಿದ್ದ. ಆ ಜನಜಂಗುಳಿಯಲ್ಲೂ ಅವನನ್ನು ಸೇರಲು ನಾನು ಓಡಬೇಕಿತ್ತು. ಅವರಿವರ ಮಧ್ಯದಲ್ಲಿ ನುಸುಳುವಾಗ ಅವರು ಹಿಡಿದಿದ್ದ ಚೀಲಗಳಲ್ಲಿದ್ದ ತರಕಾರಿ, ಹಣ್ಣು-ಹಂಪಲುಗಳು ನನ್ನ ಮುಖ-ಮೂತಿಗೆ ತಗುಲಿ ನಗುತ್ತಿದ್ದವು. ಅವುಗಳ ಮಧ್ಯದಲ್ಲಿ, ದಾರಿಯ ಎರಡು ಕಡೆ ಕಾಣುತ್ತಿದ್ದ, ಯೂನಿಫಾರ್ಮ್ ಧರಿಸಿ ಸ್ಕೂಲಿಗೆ ಹೋಗುವ ಬಾಲಕರಂತೆ ಒಂದೇ ಬಣ್ಣದ ಹಣ್ಣುಗಳು ಸಾಲಾಗಿ ನಿಂತು ನನ್ನೊಡನೆ ಕಣ್ಣಾಮುಚ್ಚಾಲೆ ಆಡುತ್ತಿದ್ದವು. ಈ ವಿಸ್ಮಯಗಳ ಮೇಲೆ ಹರಿಸಿದ ಗಮನ ಪುನಃ ಎರಡು ಚಕ್ರದ ಎಳೆಯುವ ಗಾಡಿಯ ಮೇಲೆ ಹರಿಸಲು ತಿರುಗಿದರೆ, ಗಾಡಿಯೇ ಕಾಣುತ್ತಿಲ್ಲ. ಓಹ್, ಈ ಜನ ಸಾಗರದಲ್ಲಿ ಮುಳುಗಿ ಹೋಗುತ್ತೇನೆಂಬ ಭಯದ ಬೃಹತ್ತಾದ ಅಲೆ ಬಂದು ಇನ್ನೇನು ಅಪ್ಪಳಿಸಬೇಕೆನ್ನುವಷ್ಟರಲ್ಲಿ ಅಪ್ಪನ ಅಂಗಿ ಕಂಡಿತು. ದೀರ್ಘ ನಿಟ್ಟುಸಿರು ಬಿಟ್ಟು ಓಡಿ ಹೋಗಿ ಗಾಡಿಯ ಹಿಡಿದೆ. ಅಷ್ಟರಲ್ಲಿ ತರಕಾರಿಯ ಮಂಡಿಯೂ ಸೇರಿದ್ದೆವು. ಅಲ್ಲಿಯ ಅವರ ಆ ವ್ಯವಹಾರಗಳು ನಂಗೇನು ತಿಳಿಯಲಿಲ್ಲ ಎಂದಲ್ಲ, ಗಮನಿಸುತ್ತಲೇ ಇದ್ದೆ. ಮಂಡಿಯ ಮಾಲೀಕ ಹಾಕುತ್ತಿದ್ದ ಲೆಕ್ಕಗಳನ್ನು ಹಾಗೇ ದಿಟ್ಟಿಸುತ್ತಿದ್ದೆ. ಅಪ್ಪನೇನಾದರೂ ತಕ್ಷಣ, "ಒಟ್ಟು ಎಷ್ಟಾಯ್ತು ನೋಡು" ಎಂದು ಲೆಕ್ಕ ಕೇಳಿಬಿಟ್ಟರೆ? ಎಂಬ ಅರೆ ಭಯ. ಉತ್ತರ ಸರಿಯಾಗಿರದಿದ್ದರೆ, "ಸ್ಕೂಲಿಗೆ ಹೋಗಿ ಏನು ಕಲಿತೆ?" ಎಂದುಬಿಟ್ಟಾರೆಂದು ಮುಂಚೆಯೇ ತಯಾರಾಗಿದ್ದೆ. "ಯಾರು? ಮಗಾನಾ...?" ಎಂದು ಕೇಳಿದವರಿಗೆಲ್ಲಾ ನನ್ನ ಅಪ್ಪ ನಗುತ್ತಾ ಹೌದು ಎನ್ನುತ್ತಿದ್ದುದು, ಇನ್ನೂ ನೆನಪಿದೆ. ಅದೇನೋ ಗೊತ್ತಿಲ್ಲ ಹಾಗೆಂದಾಗಲೆಲ್ಲಾ ಗರ್ವದ ನಗು ಒಳಗೆ. ಮಂಡಿಯಲ್ಲಿ ಹರಾಜು ನಡೆದು ಅಪ್ಪನ ಕೈಗೆ ಹಣ ಬಂದೊಡನೆ, ಓಹ್ ಇನ್ನೇನು ಭಯ ಏನು ಬೇಕಾದರೂ ಕೇಳಿ ತೆಗೆದುಕೊಳ್ಳಬಹುದೆಂಬ ಸಂತಸ. ಯಾರಿಗೂ ಹೇಳುವ ಹಾಗಿಲ್ಲ ಒಬ್ಬನೇ ಒಳಗೇ ಅನುಭವಿಸುತ್ತಿದ್ದೆ. ಹೇಳುತ್ತಾ ಹೋದರೆ ಇನ್ನು ಎಷ್ಟೋ ಇದೆ. ಕೆಲವು ಸಮಯದಲ್ಲಿ ಅಪ್ಪನ ಕೈಯಲ್ಲಿ ಮಂಡಿಯ ಮಾಲೀಕ ಇಡುತ್ತಿದ್ದ ದುಡ್ಡನ್ನು ಕಂಡು, ಇಂದು ನಾನು ಅಪ್ಪನನ್ನು ಏನೂ ಕೇಳಬಾರದೆಂದು ತೀರ್ಮಾನಿಸಿದ್ದೂ ಉಂಟು. ಒಂದೇ ದಿನದಲ್ಲಿ ಎಲ್ಲಾ ಭಾವನೆಗಳನ್ನು ಕಾಣಬಲ್ಲ ಅನಿಶ್ಚಿತ ಉದ್ಯೋಗ, 'ವ್ಯವಸಾಯ'. ಇಂತಹ ಜೀವನ ಶೈಲಿಯ ಜನರ ಸಿಹಿ-ಕಹಿಗಳ ರುಚಿ ಅನುಭವಿಸಿದರೆ ಮಾತ್ರ ಅರಿವಾಗುತ್ತದೆ. ನಾನು ಕಂಡ ಹಾಗೆ ಈ ಮಿಶ್ರಣದಲ್ಲಿ ಕಹಿಯು ಹೆಚ್ಚುತ್ತಿರಲು ಮುಖ್ಯ ಕಾರಣ, ಬದಲಾದ ನಮ್ಮ ವ್ಯವಸಾಯ ಪದ್ಧತಿ. ಹೌದು, ನಮ್ಮ ಇತ್ತೀಚೆಗಿನ ವ್ಯವಸಾಯ ಪದ್ಧತಿಯಲ್ಲಿ ಬಳಸುತ್ತಿದ್ದ ರಾಸಾಯನಿಕಗಳ ಕಾರಣದಿಂದ ಮೊದಲಿಗೆ ಒಳ್ಳೆಯ ಲಾಭವನ್ನು ಕಂಡ ರೈತರು ಅದನ್ನೇ ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಂಡು ಈಗ ನಷ್ಟದ ಆಳದ ಬಾವಿಗೆ ಬಿದ್ದಿದ್ದಾರೆ. ಈ ಹಾದಿಯಲ್ಲಿ ಕಳೆದುಕೊಂಡ 'ರೈತ ಮಿತ್ರ'ರ ಅರಿವೇ ಇಲ್ಲದೆ ಈಗಲು ಬಾವಿಯಿಂದ ಮೇಲೇಳಲು ಹೆಣಗಾಡುತ್ತಿದ್ದಾರೆ.




ರಾಸಾಯನಿಕ ಪದ್ಧತಿಯ ಆರಂಭದ ಸಿಹಿಯ ಅನುಭವಕ್ಕೆ ತುತ್ತಾಗಿ, ಈಗ ನಷ್ಟವೆಂಬ ರಾಕ್ಷಸನ ಹಸಿವಿಗೆ ತುತ್ತಾಗುತ್ತಿದ್ದಾರೆ. ರಾಸಾಯನಿಕ ಬಳಸಿ ಮಾಡುವ ವ್ಯವಸಾಯದಿಂದ ಮಣ್ಣು ಕ್ರಮೇಣ ವಿಷವಾಗಿರುವುದು ಈಗೀಗ ಕೆಲವರಿಗೆ ಅರಿವಾಗುತ್ತಿದ್ದರೆ, ಚಿಕ್ಕವರಿದ್ದಾಗ ಕಲಿತಿದ್ದ ರೈತ ಮಿತ್ರ ಎರೆಹುಳು ಮಾತ್ರವಲ್ಲದೆ, ಇರುವೆ, ಜೇಡ, ದುಂಬಿ, ಪಕ್ಷಿ, ಸೂಕ್ಷ್ಮ ಜೀವಿಗಳೆಷ್ಟೋ ಮಂದಿ ರೈತನ ಇಳುವರಿಗೆ ಶ್ರಮಿಸುತ್ತಿದ್ದವು ಎಂಬುದನ್ನು ಈಗೀಗ ಕಣ್ಣು ತೆರೆದು ನೋಡುವ ಹಾಗಾಗಿದೆ. ಬಹುಶಃ ಅವುಗಳ ನಿಜವಾದ ಮೌಲ್ಯವನ್ನು ರೂಪಾಯಿಗಳಲ್ಲಿ ಹೇಳಿದರೆ ಎಚ್ಚೆತ್ತು ಉಳಿಸಿಕೊಳ್ಳುತ್ತಾರೇನೋ... ಹಾಗಾದರೆ ಅದನ್ನೂ ನೋಡೋಣ ಬನ್ನಿ, ಅಮೇರಿಕಾದಲ್ಲಿಯೂ ದೊಡ್ಡ ಪ್ರಮಾಣದಲ್ಲಿ ವ್ಯವಸಾಯ ಮಾಡುವ ರೈತರಿದ್ದಾರೆ. ಅವರೂ ಸಹ ರಾಸಾಯನಿಕ ವ್ಯವಸಾಯವನ್ನು ಶುರು ಮಾಡಿದರು. ಮೊದಲಿಗೆ ಒಳ್ಳೆಯ ಫಲಿತಾಂಶವೇ ಬಂತು. ಅದನ್ನೇ ನಂಬಿ ಮುಂದೆ ಹೋದ ಅವರಿಗೆ ಬರಬರುತ್ತಾ ಇಳುವರಿ ಕುಂಟುತ್ತಾ ಸಾಗಿದಂತೆ, ಇನ್ನೂ ಹೆಚ್ಚು ರಾಸಾಯನಿಕ ಬಳಸಲು ಮುಂದಾದರು. ಆದರೂ ಅಂದುಕೊಂಡ ಯಶಸ್ಸು ಕಾಣಲಾಗಲಿಲ್ಲ. ನಂತರ ಸ್ವಲ್ಪ ಬುದ್ಧಿ ಉಪಯೋಗಿಸಿ 'ಕೃತಕ ಜೇನು ಸಾಕಣೆ' (ಪ್ರಾದೇಶಿಕವಲ್ಲದ ಜೇನು ಹುಳುಗಳಿಂದ) ಮಾಡಿ ಅದರಿಂದ ಆಗುವ ಪರಾಗಸ್ಪರ್ಶ ಕ್ರಿಯೆಯ ಮೂಲಕ ತಮ್ಮ ಇಳುವರಿ ಹೆಚ್ಚುತ್ತದೆಂಬ ವಿಜ್ಞಾನ ಜ್ಞಾನವನ್ನು ಬಳಸಿ ಮಾಡಿದರು. ಹೀಗೆ ಪ್ರತೀ ಬೀಳಿಗೆ (fall) ತಕ್ಷಣದ ಉಪಾಯ ಮಾತ್ರ ಹುಡುಕುತ್ತಾ ಹೊರಟರೇ ಹೊರತು ಮೂಲ ಕಾರಣವು ಅದಲ್ಲ ಅಥವಾ ಅದಕ್ಕೆ ಸೂಕ್ತ ಪರಿಹಾರವೂ ಅಲ್ಲ. ನಾವೂ ಸಹ ಅವರ ದಾರಿಯಲ್ಲೇ ಸಾಗುತ್ತಿದ್ದೇವೆ.

ಅಮೇರಿಕಾದಲ್ಲಿ ನಡೆದ ಒಂದು ಸಂಶೋಧನೆಯನ್ನು ವಿವರಿಸುತ್ತೇನೆ. ಅದನ್ನು ತಿಳಿದ ಬಳಿಕ ನಿಮಗೇನು ಅನ್ನಿಸುತ್ತದೆಯೋ ನೀವೇ ಅರ್ಥ ಮಾಡಿಕೊಳ್ಳಿ. ಸಂಶೋಧಕರು ಅಮೇರಿಕಾದ ಸುಮಾರು 131 ಸ್ಥಳಗಳಲ್ಲಿನ ವ್ಯವಸಾಯ ಭೂಮಿಯನ್ನು ಆರಿಸಿಕೊಂಡು, ಅಲ್ಲಿ ಬೆಳೆಯುವ 7 ಬಗೆಯ ಬೆಳೆಗಳನ್ನು ಪಟ್ಟಿ ಮಾಡಿಕೊಂಡರು. ಅದರಲ್ಲಿ ಕೃತಕವಾಗಿ ಸಾಕಿದ್ದ ಜೇನು ಹುಳುಗಳು ಬೆಳೆಯ ಒಟ್ಟು ಇಳುವರಿಗೆ ಎಷ್ಟು ಭಾಗವಹಿಸುತ್ತಿದ್ದವು ಎಂದು ಲೆಕ್ಕ ಹಾಕಿದರು. ಅದರಲ್ಲಿ ಅವರಿಗೆ ತಿಳಿದದ್ದು ಹೆಚ್ಚಾಗಿ ರಾಸಾಯನಿಕ ಬಳಸಿ ಬೆಳೆಯುವ ಬೆಳೆಗಳಲ್ಲಿ ಅವುಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೇ... ಅಲ್ಲಿಯ ಪ್ರಾದೇಶಿಕ ತಳಿಯ ಜೇನುಗಳು ಎಡೆಬಿಡದೆ ಅಲ್ಲಿಗೆ ಆದಷ್ಟು ಸಂಖ್ಯೆಯಲ್ಲಿ ಆಗಮಿಸಿ ಪರಾಗಸ್ಪರ್ಶ ಮಾಡುತ್ತಿದ್ದವಂತೆ, ಕೇವಲ ಈ ಪ್ರಾದೇಶಿಕ ತಳಿಯ ದುಂಬಿಗಳ ಕೊಡುಗೆಯನ್ನು ರೂಪಾಯಿಗಳಲ್ಲಿ ಲೆಕ್ಕ ಹಾಕಿದರೆ, ಅಲ್ಲಿನ ಮಿಶಿಗನ್ ಮತ್ತು ಪೆನ್ನಿಸಿಲ್ವೇನಿಯಾ ಪ್ರದೇಶದ ಸೇಬುಹಣ್ಣಿನ ಇಳುವರಿಯಲ್ಲಿ ಸುಮಾರು 1.06 ಬಿಲಿಯನ್ ಡಾಲರ್ ಅಂದರೆ 7,800 ಕೋಟಿಗೂ ಹೆಚ್ಚು ಇಳುವರಿ ಪ್ರಾದೇಶಿಕ ತಳಿಯ ದುಂಬಿಗಳಿಂದಲೇ ಆಗುತ್ತಿದೆ. ಫ್ಲೋರಿಡಾದಲ್ಲಿ ಬೆಳೆಯುವ ಕಲ್ಲಂಗಡಿ ಹಣ್ಣಿನ ಆದಾಯದಲ್ಲಿ 146 ಮಿಲಿಯನ್ ಡಾಲರ್ ಅಂದರೆ 1,084 ಕೋಟಿಗೂ ಹೆಚ್ಚು ಆದಾಯದಲ್ಲಿ ಕಾಡು ದುಂಬಿಗಳದ್ದೇ ಪಾತ್ರ. ಸಿಹಿ ಚೆರ್ರಿಯ ಆದಾಯದಲ್ಲಿ 145 ಮಿಲಿಯನ್ ಡಾಲರ್ ಅಂದರೆ 1,076 ಕೋಟಿಗೂ ಹೆಚ್ಚು. ಹೀಗೆ ಕೇವಲ 6 ಬೆಳೆಯ ಇಳುವರಿಯಲ್ಲಿ ಈ ಪ್ರಾದೇಶಿಕ ಅಥವಾ ಕಾಡು ದುಂಬಿಗಳ ಕೊಡುಗೆ ಲೆಕ್ಕ ಹಾಕಿದರೆ 1.5 ಬಿಲಿಯನ್ ಡಾಲರ್ ಗೂ ಹೆಚ್ಚು ಆದಾಯ ಇವುಗಳಿಂದಲೇ ಎಂದು ಸಂಶೋಧನೆ ಹೇಳುತ್ತಿದೆ. ನಾನಲ್ಲ.




ಇನ್ನು ಉಳಿದದ್ದು ನಿಮಗೆ ಬಿಟ್ಟದ್ದು. ಇದನ್ನು ಅಲ್ಲಗೆಳೆಯಲು ಅಂಶಗಳನ್ನು ಹುಡುಕುವುದೋ ಅಥವಾ ನಮ್ಮ ಸ್ವಾಭಾವಿಕ ವ್ಯವಸ್ಥೆಯ ಈ ಸೂಕ್ಷ್ಮ ಭಾಗವನ್ನೇ ಆಧಾರವಾಗಿಟ್ಟುಕೊಂಡು, ಅದರೊಂದಿಗೆ ಬೆರೆತು ಬಾಳ್ವೆ ನಡೆಸಬಹುದಾದಂತಹ ದೀರ್ಘ ಕಾಲದ ಆರೋಗ್ಯಕರ ಸಂಬಂಧವನ್ನು ಬೆಳೆಸಿಕೊಂಡು ಮುಂದಿನ ಪೀಳಿಗೆಗೆ ಒಳ್ಳೆಯ ಮಾದರಿಯಲ್ಲದಿದ್ದರೂ, ಕೆಟ್ಟ ಮಾದರಿಗಳಾಗದಂತೆ ಎಚ್ಚರವಹಿಸುವುದೋ... ಎಲ್ಲಾ ನಮ್ಮ ನಮ್ಮ ಕೈಯಲ್ಲಿದೆ.

**ಮೂಲ ಲೇಖನ:** ScienceNewsforStudents




**ಲೇಖನ: ಜೈಕುಮಾರ್ ಆರ್.**
**ಡಬ್ಲ್ಯೂ. ಸಿ. ಜಿ. ಬೆಂಗಳೂರು ಜಿಲ್ಲೆ**

# ವಸುಂಧರೆ

ಹಸಿರ ಸೀರೆಯುಟ್ಟು
ಉಸಿರ ಕಾಯ್ವಳು ವಸುಂಧರೆ
ಎಲ್ಲರಿಗೂ ಆಸರೆಯಾಗಿ
ನೆಮ್ಮದಿಯ ನೆಲೆಯಾಗಿಹ ಧರೆ

ಸಕಲ ಜೀವರಾಶಿಗಳಿಗೂ
ನೀನು ಪೊರೆವ ಜನನಿ
ಸಕಲ ಜೀವಸಂಕುಲಗಳಿಗೂ
ತಾಯಿಯಾದಳು ಅವನಿ

ಅದ್ಭುತ ಸೌಂದರ್ಯದ
ರಮಣೀಯ ಧರಣಿ
ಅಗಣಿತ ನಿಧಿ ನಿಕ್ಷೇಪವ
ತುಂಬಿಕೊಂಡಿಹ ಗಣಿ

ವರ್ಷಧಾರೆಯ ಆಗಮನದಿ
ಶೃಂಗಾರಗೊಂಡ ತರುಣಿ
ವಾತ್ಸಲ್ಯಮಯಿಯ ಕರುಣೆಗೆ
ನಾವೆಲ್ಲರೂ ಚಿರ ಋಣಿ

- ಜನಾರ್ಧನ್ ಎಂ. ಎನ್.
ಭಟ್ಕಳ, ಉತ್ತರ ಕನ್ನಡ ಜಿಲ್ಲೆ

© MaxPixel

# ಪ್ರಕೃತಿ ಬಿಂಬ




**ಬಾಲದ ತಾಳೆ ಚಿಟ್ಟೆ** © **ತುಷಾರ್ ಜಿ. ಆರ್.**

ಈ ಚಿಟ್ಟೆ ಸ್ವಲ್ಪ ಸೋಮಾರಿ, ಹಾಗಾಗಿ ಇದು ಹಾರುವುದು ಅಪರೂಪ. ಹಾರಿದಾಗ ಬೆಂಕಿಯೇ ಹಾರುತ್ತಿದೆ ಎನಿಸುತ್ತದೆ. ಬೆಂಕಿಯಂತೆ ಉಜ್ವಲ ವರ್ಣವಿರುವ ಒಳ ರೆಕ್ಕೆಯೇ ಇದಕ್ಕೆ ಕಾರಣ. ಯಾವುದಾದರೂ ಒಂದು ಗಿಡ ಅಥವಾ ಮರದ ಎಲೆಯ ಮೇಲೆ ಹೋಗಿ ಗಂಟೆಗಟ್ಟಲೆ ಕುಳಿತು ಬಿಡುತ್ತದೆ. ರೆಕ್ಕೆಯನ್ನು ಕೂಡ ಬಿಚ್ಚುವುದಿಲ್ಲ. ಏನಾದರೂ ಕುಳಿತುಕೊಂಡಾಗ ರೆಕ್ಕೆ ಬಿಚ್ಚುವುದೇ ಎಂದು ನಾನೂ ಸತತ 20 ದಿನ ಗಮನಿಸಿದೆ. ಆದರೆ ಕೊನೆಗೂ ಅದು ರೆಕ್ಕೆ ಬಿಚ್ಚಲಿಲ್ಲ. ಆದರೆ ಹಾರುವಾಗ ಆ ರೆಕ್ಕೆಯ ಉಜ್ವಲ ವರ್ಣ ಕಾಣಿಸುತ್ತದೆ. ಹಾಗಾಗಿ ಪಕ್ಕದಿಂದ ತೆಗೆದಿರುವ ಚಿತ್ರ ಮಾತ್ರ ಸಿಕ್ಕಿದೆ.



**ಸೂರ್ಯಪ್ರಕಾಶ ಚಿಟ್ಟೆ – ಗಂಡು** © **ತುಷಾರ್ ಜಿ. ಎರ್.**

ಒಂದು ಮಳೆಗಾಲದಲ್ಲಿ ನಮ್ಮ ಊರಾದ ದಾವಣಗೆರೆಯಲ್ಲಿ ವಾತಾವರಣ ತುಂಬಾ ತಂಪಾಗಿತ್ತು. ಎಲ್ಲೆಲ್ಲೂ ತಂಗಾಳಿ ಹಾಗೂ ಮೋಡ ಮುಸುಕಿದ ವಾತಾವರಣ. ನಾನು ಫೋಟೋಗ್ರಫಿಗೆ ಹೋದಾಗ ಈ ಚಿಟ್ಟೆಯನ್ನು ಮೊದಲ ಬಾರಿ ಕಂಡೆನು. ಇದರ ಬಣ್ಣ ಬಹಳ ಮನಮೋಹಕವೆನಿಸಿತು. ಆ ಗಿಡಗಳ ಹಸಿರಿಗೂ ಈ ಚಿಟ್ಟೆಯ ಬಣ್ಣ ಎರಡು ಮನಮೋಹಕವಾಗಿತ್ತು. ಈ ಚಿಟ್ಟೆ ಸಾಮಾನ್ಯವಾಗಿ ಮಳೆ ಬೀಳುವ ಪ್ರದೇಶದಲ್ಲಿ ವಾಸಿಸುತ್ತದೆ. ಆಗ ಮುಂಗಾರಿನ ಸಮಯ, ಪ್ರಕೃತಿ ಸ್ವಲ್ಪ ಹಸಿರಾಗಿದ್ದ ಕಾರಣ ನಮ್ಮಲ್ಲಿಗೆ ಬಂದಿತ್ತು ಈ ಸುಂದರ ಚಿಟ್ಟೆ. ಹಿಮಾಲಯ, ಅಸ್ಸಾಮ್, ಸೌರಾಷ್ಟ್ರ, ಬಂಗಾಳ, ಶ್ರೀಲಂಕಾ, ಫಿಲಿಪೈನ್ಸ್, ಮಯನ್ಮಾರ್ ಹಾಗೂ ನಿಕೋಬಾರ್ ದ್ವೀಪಗಳಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ. ಮಳೆ ಬೀಳುವ ಪ್ರದೇಶದಲ್ಲಿ ಸಾಮಾನ್ಯವಾಗಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಗಂಡು ಚಿಟ್ಟೆಗೆ ಮೇಲಿನ ರೆಕ್ಕೆಯ ಭಾಗ ಕಂಚುಕೆಂಪು ಬಣ್ಣ ಇರುತ್ತದೆ. ಕೆಳಭಾಗದಲ್ಲಿ ಹೊಳೆಯುವ ಬೆಳ್ಳಿ ವರ್ಣ ಇರುತ್ತದೆ. ಹೆಣ್ಣು ಚಿಟ್ಟೆಯ ರೆಕ್ಕೆಯ ಮೇಲ್ಭಾಗದಲ್ಲಿ ಕಪ್ಪುಕಂದು ಬಣ್ಣವಿರುತ್ತದೆ. ಅಲ್ಲಲ್ಲಿ ಬಿಳಿ ಮಚ್ಚೆ ಕೂಡ ಹೆಣ್ಣು ಚಿಟ್ಟೆಯ ರೆಕ್ಕೆ ಮೇಲೆ ಇರುತ್ತದೆ.



**ನೀಲಿ ಹುಲಿ ಚಿಟ್ಟೆ** © **ತುಷಾರ್ ಜಿ. ಆರ್.**

ಈ ಚಿಟ್ಟೆ ಬಿಸಿಲಲ್ಲಿ ತುಂಬಾ ಚೂಟಿಯಾಗಿ ಹಾರಾಡುತ್ತದೆ. ಅದಕ್ಕೆ ಕಾರಣ ಚಿಟ್ಟೆಯ ರೆಕ್ಕೆಗಳ ಮೇಲೆ ಇರುವ ಕಪ್ಪು ಪಟ್ಟಿ, ಅದು ಶಾಖವನ್ನು ಹೀರಿಕೊಂಡು ಹಾರಾಟಕ್ಕೆ ಸಹಾಯ ಮಾಡುತ್ತದೆ ಎಂದು ತಿಳಿದುಬಂದಿದೆ. ಬೆಳಕು ಜಾಸ್ತಿ ಇದ್ದಷ್ಟು ಇವುಗಳ ಹಾರಾಟ ಕೂಡ ಹೆಚ್ಚು. ನಮ್ಮ ದಕ್ಷಿಣ ಭಾರತದಲ್ಲಿ ಇವುಗಳು ಹೆಚ್ಚಾಗಿ ಇರುವುದನ್ನು ನಾವು ಗಮನಿಸಬಹುದು. ಇವುಗಳು ಮುಂಗಾರಿನ ಸಮಯದಲ್ಲಿ ವಲಸೆ ಹೋಗುತ್ತವೆ. ಅಶ್ಚರ್ಯದ ವಿಷಯ ಏನಂದರೆ ಇತ್ತೀಚಿಗೆ 2019ರಲ್ಲಿ ಈ Tirumala limniace ಚಿಟ್ಟೆ ಯುರೋಪ್ ನಲ್ಲಿ ಕೂಡಾ ಕಾಣಸಿಕ್ಕಿದ್ದು, ಮೊದಲ ಬಾರಿಗೆ ವರದಿಯಾಗಿದೆ.




**ರಕ್ತ ಕೆಂಪಿ ಚಿಟ್ಟೆಗಳ ಮಿಲನ** © **ತುಷಾರ್ ಜಿ. ಏರ್.**

ಈ ಚಿಟ್ಟೆಯು ಸಾಮಾನ್ಯವಾಗಿ ದಕ್ಷಿಣ ಭಾರತ, ಶ್ರೀಲಂಕಾ, ಮಾಲ್ಡಿವ್ಸ್ ಹೀಗೆ ದಕ್ಷಿಣ ಏಷ್ಯಾದ ಎಲ್ಲಾ ಪ್ರದೇಶಗಳಲ್ಲಿನ ಕಾಡುಗಳಿರುವ ಜಾಗಗಳಲ್ಲಿ ಹಾಗೂ ಬಯಲಿನ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಲಂಟಾನದ ಗಿಡ ಇರುವಲ್ಲಿ ಈ ಚಿಟ್ಟೆಗಳು ಹಾರಾಡುತ್ತ ಇರುವುದನ್ನು ನೀವು ಗಮನಿಸಬಹುದು. ಲಂಟಾನಾ ಗಿಡದ ಮಕರಂದ ಈ ಚಿಟ್ಟೆಗಳಿಗೆ ತುಂಬಾ ಇಷ್ಟ. ಈ ಚಿಟ್ಟೆಗಳು ಸೂಸುವ ವಿಷಕಾರಿ ದ್ರವ್ಯದಿಂದ ಬೇರೆ ಜೀವಿಗಳು ಇದನ್ನು ಬೇಟೆಯಾಡುವುದು ಕಷ್ಟ. ಈ ಕಾರಣದಿಂದ ಕಾಮನ್ ಮಾರ್ಮನ್ (Papilio polytes) ಚಿಟ್ಟೆಯು ಈ Crimson Rose ಚಿಟ್ಟೆಯನ್ನು ಹೋಲುವುದರಿಂದ ಬೇಟೆಗಾರರಿಂದ ತಪ್ಪಿಸಿಕೊಳ್ಳುತ್ತದೆ.

**ಚಿತ್ರ- ಲೇಖನ:** **ತುಷಾರ್ ಜಿ. ಆರ್.**
**ದಾವಣಗೆರೆ**

# ನೀವೂ ಕಾನನಕ್ಕೆ ಬರೆಯಬಹುದು




ನದಿಗಳು, ಕುಡಿಯುವ ನೀರು, ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಭೂಮಿಯನ್ನು, ತಿನ್ನಲು ಮೀನನ್ನು ಒದಗಿಸುವ ಕಾರಣ ಅಲೆಮಾರಿಯಾಗಿದ್ದ ಮಾನವ ನದಿಯ ದಂಡೆಗಳಲ್ಲಿ ನೆಲೆಯೂರಲು ಶುರುಮಾಡಿದ. ಮೊದಲು ಕೇವಲ ಬೆರಳೆಣಿಕೆಯಷ್ಟಿದ್ದ ಜನಸಂಖ್ಯೆ ಕಾಲಕಳೆದಂತೆ ಮಿತಿ ಮೀರಿ ಬೆಳೆಯಿತು. ನದಿಯ ದಡದಲ್ಲಿದ್ದ ಚಿಕ್ಕ ಚಿಕ್ಕ ಊರುಗಳು ನಗರಗಳಾದವು, ಜನಸಂಖ್ಯೆ ಹೆಚ್ಚಿದಂತೆ ಕುಡಿಯಲು ಯೋಗ್ಯವಾಗಿದ್ದ ನದಿಯ ನೀರು, ಬಳಕೆಗೂ ನಿಲುಕದಂತೆ ಕಲ್ಮಶವಾಯಿತು. ಇನ್ನು ನಗರದಲ್ಲಿನ ಚರಂಡಿ ನೀರನ್ನು, ಕಾರ್ಖಾನೆಗಳ ತ್ಯಾಜ್ಯಗಳನ್ನು, ಕೆಲವೊಮ್ಮೆ ಹೆಣಗಳನ್ನು ನದಿಗೆ ಎಸೆಯುವ ಕಾರಣ ವ್ಯವಸಾಯಕ್ಕೂ ನದಿಯ ನೀರನ್ನು ಅವಲಂಬಿಸುವುದು ಕಷ್ಟಕರವಾಗುತ್ತಿದೆ. ಹೀಗೆಯೇ ಮುಂದುವರಿದರೆ ನೀರಿಗಾಗಿಯೇ ಯುದ್ಧಗಳು ಆಗುವ ದಿನಗಳು ದೂರವಿಲ್ಲ. ಹಾಗಾಗಿ ನದಿಯ ಮಾಲಿನ್ಯವನ್ನು ತಪ್ಪಿಸಲು, ಸಾಮಾನ್ಯ ಜನರಲ್ಲಿ ನದಿಗಳ ಬಗೆಗಿನ ಅರಿವು ಮೂಡಿಸಲು ಪ್ರತಿ ವರ್ಷ ಸೆಪ್ಟೆಂಬರ್ ನಾಲ್ಕನೇ ಭಾನುವಾರ ವಿಶ್ವ ನದಿಗಳ ದಿನವನ್ನು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:

Study House,

ಕಾಳೇಶ್ವರಿ ಗ್ರಾಮ,

ಆನೇಕಲ್ ತಾಲ್ಲೂಕು,

ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.